# ಹಂಪಿ ಟೈಮ್ಸ್
HAMPI TIMES

ಸಂಪಾದಕರ: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY






| | | | | | | | |
|---|---|---|---|---|---|---|---|
| ಸಂಪುಟ:01 | ಸಂಚಿಕೆ:152 | ನೋಂದಣಿ ಸಂ.:KARKAN27911 | ವಿಜಯನಗರ | 09.11.2023 | ಗುರುವಾರ | ಪುಟ:04 | ಬೆಲೆ:2 |
| Volume:01 | Issue:152 | Reg.No:KARKAN27911 | VIJAYANAGARA | 09.11.2023 | Thursday | Page:04 | Rs:2 |







## ಮೈಕ್ರೋ ನ್ಯೂಸ್

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನ.18ರಂದು ಕೂಡ್ಲಿಗಿಯಲ್ಲಿ ಜನತಾ ದರ್ಶನ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತದಿಂದ ತಾಲ್ಲೂಕು ಮಟ್ಟದ 'ಜನತಾ ದರ್ಶನ' ಕಾರ್ಯಕ್ರಮವನ್ನು ನ.18ರಂದು



ಕೂಡ್ಲಿಗಿ ತಾಲ್ಲೂಕಿನ ಪ್ರವಾಸಿ ಮಂದಿರ (ಐಬಿ) ದಲ್ಲಿ ಬೆಳಿಗ್ಗೆ 10.30ಕ್ಕೆ ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ದಿವಾಕರ ಎಂ.ಎಸ್. ಅವರು ತಿಳಿಸಿದ್ದಾರೆ.
ಸರ್ಕಾರದ ನಿರ್ದೇಶನದನ್ವಯ ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಿ, ಪರಿಹಾರ ಕೈಗೊಳ್ಳುವ ನಿಟ್ಟಿನಲ್ಲಿ ಸಂಬಂಧಿಸಿದ ಚುನಾಯಿತ ಪ್ರತಿನಿಧಿಗಳು ಮತ್ತು ಜಿಲ್ಲಾ ಮಟ್ಟದ ಎಲ್ಲಾ ಅಧಿಕಾರಿಗಳ ಉಪಸ್ಥಿತಿಯಲ್ಲಿ ನಡೆಯಲಿರುವ ತಾಲ್ಲೂಕು ಮಟ್ಟದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಕೂಡ್ಲಿಗಿ ತಾಲ್ಲೂಕಿನ ಸಾರ್ವಜನಿಕರು ತಮ್ಮ ಅಹವಾಲುಗಳೊಂದಿಗೆ ಹಾಜರಿರುವಂತೆ ಪ್ರಕಟಣೆ ತಿಳಿಸಿದೆ.

## ಕರ್ನಾಟಕ ಸಂಭ್ರಮ-50ರ ರಥಯಾತ್ರೆ ಸಂಚಾರ ಪೂರ್ವಭಾವಿ ಸಭೆ ನ.09ರಂದು

**ಹಂಪಿ ಟೈಮ್ಸ್ ಬಳ್ಳಾರಿ**

ಕರ್ನಾಟಕ ಏಕೀಕರಣಗೊಂಡು 50ವರ್ಷ ಪೂರೈಸುತ್ತಿರುವ ಹಿನ್ನಲೆಯಲ್ಲಿ ರಾಜ್ಯಾದ್ಯಂತ ಕರ್ನಾಟಕ ಸಂಭ್ರಮ-50ರ ರಥಯಾತ್ರೆ ಸಂಚರಿಸುತ್ತಿದ್ದು, ಜಿಲ್ಲೆಯಲ್ಲಿ ನ.16ರಿಂದ 24ರವರೆಗೆ ರಥಯಾತ್ರೆ ಸಂಚಾರ ನಡೆಸಲಿದೆ.
ಈ ಸಂಭ್ರಮದ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಕುರಿತು ಚರ್ಚಿಸಲು ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಗೂ ಜಿಲ್ಲೆಯ ವಿವಿಧ ಕನ್ನಡ ಪರ ಸಂಘಟನೆಗಳೊಂದಿಗೆ ನ.09ರಂದು ಬೆಳಿಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಪೂರ್ವಭಾವಿ ಸಭೆ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕುಕನೂರು ನವೋದಯ ವಿದ್ಯಾಲಯ: ಅರ್ಜಿ ಸಲ್ಲಿಕೆ ಅವಧಿ ವಿಸ್ತರಣೆ

**ಹಂಪಿ ಟೈಮ್ಸ್ ಕೊಪ್ಪಳ**

2023-24ನೇ ಸಾಲಿನಲ್ಲಿ 8ನೇ ತರಗತಿ ಮತ್ತು 10ನೇ ತರಗತಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಜವಾಹರ ನವೋದಯ ವಿದ್ಯಾಲಯದಲ್ಲಿ ಖಾಲಿ ಇರುವ ಸ್ಥಾನಗಳಿಗೆ 2024-25ನೇ ಸಾಲಿನಲ್ಲಿ 9ನೇ ಹಾಗೂ 11ನೇ ತರಗತಿಗೆ ಪ್ರವೇಶಕ್ಕಾಗಿ ಆನ್‌ಲೈನ್ ಪ್ರವೇಶ ಪರೀಕ್ಷೆಯ ಅರ್ಜಿ ಸಲ್ಲಿಕೆ ಅವಧಿಯನ್ನು ನವೆಂಬರ್ 15 ರವರೆಗೆ ವಿಸ್ತರಿಸಲಾಗಿದೆ.
ಮುಂದುವರೆದು ಕೆಲವೊಂದು ಪ್ರಮುಖ ಏರಿಯಾಗಳಲ್ಲಿ ವ್ಯತ್ಯಾಸವಿದ್ದರೆ ತಿದ್ದುಪಡಿ ಮಾಡಲು ನವಂಬರ್ 16 ಮತ್ತು 17 ರಂದು ತಿದ್ದುಪಡಿಗೆ ಅವಕಾಶ ನೀಡಲಾಗಿದೆ.
ಅರ್ಜಿಗಳನ್ನು ನವೋದಯ ವಿದ್ಯಾಲಯ ಸಮಿತಿಯ ಜಾಲತಾಣ ತಿತಿತಿ.ಟಿಚಿತಂಜಚಿಥಿಚಿ.ರಂತ.ಎಟ ಮುಖಾಂತರ ಸಲ್ಲಿಸಬೇಕು. 2024 ರ ಫೆಬ್ರವರಿ 10 ರಂದು ಪ್ರವೇಶ ಪರೀಕ್ಷೆಗಳು ನಡೆಯಲಿವೆ ಎಂದು ಕುಕನೂರು ನವೋದಯ ವಿದ್ಯಾಲಯದ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನಾಮಪತ್ರ ಸಲ್ಲಿಸಿ ಕಾಣೆಯಾದ ಬಣ!

### ಅಧ್ಯಕ್ಷ ಸ್ಥಾನದ ಆಕಾಂಕ್ಷಿ ನಿರ್ದೇಶಕ ಕೆ.ತಿಪ್ಪೇಸ್ವಾಮಿ ಬಣ ಹಾಜರು । ನಿರ್ದೇಶಕ ಚೊಕ್ಕಬಸವನಗೌಡ ಬಣ ನಾಮಪತ್ರ ಸಲ್ಲಿಸಿ ಗೈರು


ಹೊಸಪೇಟೆ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ನಿರ್ದೇಶಕ ಕೆ.ತಿಪ್ಪೇಸ್ವಾಮಿ ನಾಮಪತ್ರ ಸಲ್ಲಿಸಿದರು


ಹೊಸಪೇಟೆ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ನಿರ್ದೇಶಕ ಚೊಕ್ಕಬಸವನಗೌಡ ನಾಮಪತ್ರ ಸಲ್ಲಿಸಿದರು

**ಹಂಪಿ ಟೈಮ್ಸ್ ಹೊಸಪೇಟೆ:**
ನಗರದ ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ಇಬ್ಬರು ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಇಬ್ಬರು ಆಕಾಂಕ್ಷಿಗಳು ನಾಮಪತ್ರ ಸಲ್ಲಿಸಿದ್ದು, ಅಧ್ಯಕ್ಷ, ಉಪಾಧ್ಯಕ್ಷ ಅಯ್ಕೆ ಪ್ರಕ್ರಿಯೆಗೆ ಕೋರಂ ಕೊರತೆಯಿಂದ ಸಭೆ ಮುಂದೂಡಲಾಗಿದೆ ಎಂದು ಚುನಾವಣಾಧಿಕಾರಿ ವಿಶ್ವಜೀತ್ ಮಹ್ತಾ ಹೇಳಿದರು.
ನಗರದ ಬಿಡಿಸಿಸಿ ಬ್ಯಾಂಕ್ ನಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಧ್ಯಕ್ಷ ಸ್ಥಾನಕ್ಕೆ ನಿರ್ದೇಶಕ ಕೆ.ತಿಪ್ಪೇಸ್ವಾಮಿ, ನಿರ್ದೇಶಕ ಚೊಕ್ಕಬಸವನಗೌಡ ನಾಮಪತ್ರ ಸಲ್ಲಿಸಿದ್ದಾರೆ. ನಿರ್ದೇಶಕರಾದ ಪಿ.ಮೂಕಯ್ಯಸ್ವಾಮಿ, ಐ.ದಾರುಕೇಶ ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದಾರೆ.
14 ಚುನಾಯಿತ ನಿರ್ದೇಶಕರು, ಸಹಕಾರ ಇಲಾಖೆಯ ಉಪನಿಬಂಧಕರು ಮತ್ತು ಅಪೇಕ್ಸ್ ಬ್ಯಾಂಕ್ ನಾಮನಿರ್ದೇಶಿತ ತಲಾ ಒಬ್ಬ ಸದಸ್ಯರು ಸೇರಿ ಒಟ್ಟು 16 ನಿರ್ದೇಶಕರ ಪೈಕಿ 8 ನಿರ್ದೇಶಕರು ಮಾತ್ರ ಸಭೆಯಲ್ಲಿ ಹಾಜರಿದ್ದರು. ಆಯ್ಕೆ ಪ್ರಕ್ರಿಯೆಗೆ ಕನಿಷ್ಠ 9 ನಿರ್ದೇಶಕರು ಇರಬೇಕಾಗುತ್ತದೆ. ಕೋರಂ ಕೊರತೆ ಇದ್ದುದರಿಂದ ನಾಮಪತ್ರ ಪರಿಶೀಲನೆ ಸೇರಿದಂತೆ ಆಯ್ಕೆ ಪ್ರಕ್ರಿಯೆಯನ್ನು ಮುಂದೂಡಲಾಗಿದೆ. ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ಪ್ರಕ್ರಿಯೆಯ ಮುಂದಿನ ದಿನಾಂಕವನ್ನು ಶೀಘ್ರದಲ್ಲೆ ತಿಳಿಸಲಾಗುವುದು. ಮುಂದಿನ ಆಯ್ಕೆ ಪ್ರಕ್ರಿಯೆ ಸಂದರ್ಭದಲ್ಲಿ ಹೊಸದಾಗಿ ನಾಮಪತ್ರ ಸಲ್ಲಿಕೆಗೆ ಆಕಾಂಕ್ಷಿಗಳಿಗೆ ಅವಕಾಶವಿರುವುದಿಲ್ಲ ಈಗ ಸಲ್ಲಿಸಿರುವ ಅಭ್ಯರ್ಥಿಗಳ ನಾಮಪತ್ರಗಳ ಪರಿಶೀಲಿಸಿ ಮುಂದಿನ ಆಯ್ಕೆ ಕಾರ್ಯ ಕೈಗೊಳ್ಳಲಾಗುವುದು ಎಂದರು.



**ಹಾಜರಿದ್ದವರು: ನಿರ್ದೇಶಕರಾದ** ಎಲ್.ಎಸ್.ಆನಂದ, ಪಿ.ಮೂಕಯ್ಯಸ್ವಾಮಿ, ಕೆ.ತಿಪ್ಪೇಸ್ವಾಮಿ, ವೈ.ಅಣ್ಣೆಪ್ಪ, ಡಿ.ನವೀನ್ ಕುಮಾರ ರೆಡ್ಡಿ, ಜೆ.ಎಂ.ಶಿವಪ್ರಸಾದ, ವಿ.ಆರ್.ಸಂದೀಪ್‌ಸಿಂಗ್, ಡಿ.ವಿಶ್ವನಾಥ ಹಾಜರಿದ್ದು, ಇನ್ನುಳಿದವರೂ ಗೈರಾಗಿದ್ದರು. ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದ ಚೊಕ್ಕಬಸವನಗೌಡ, ಐ.ದಾರುಕೇಶ. ಮತ್ತವರ ಬೆಂಬಲಿಗರು ಆಯ್ಕೆ ವೇಳೆ ಸಭೆಯಲ್ಲಿ ಗೈರು ಹಾಜರಾಗಿದ್ದರಿಂದ ಆಯ್ಕೆ ಪ್ರಕ್ರಿಯೆ ಸ್ಥಗಿತಗೊಳಿಸಿ ಮುಂದೂಡಲ್ಪಟ್ಟಿತು.

**ಬಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಉಪಾಧ್ಯಕ್ಷರ ಆಯ್ಕೆಗೆ ಬೆಳಿಗ್ಗೆ 10 ರಿಂದ ಮಧ್ಯಾಹ್ನ 12ರವರೆಗೆ ನಾಮಪತ್ರ ಸಲ್ಲಿಕೆಗೆ ಅವಕಾಶ ನೀಡಲಾಗಿತ್ತು. ಅಧ್ಯಕ್ಷ ಸ್ಥಾನಕೆಕ ಇಬ್ಬರು, ಉಪಾಧ್ಯಕ್ಷ ಸ್ಥಾನಕ್ಕೆ ಇಬ್ಬರು ಆಕಾಂಕ್ಷಿಗಳು ನಾಮಪತ್ರ ಸಲ್ಲಿಸಿದ್ದರು. ಮಧ್ಯಾಹ್ನ 2ಗಂಟೆ ಪರಿಶೀಲನೆ ಕಾರ್ಯ ನಡೆಯಬೇಕಿತ್ತು. ಕೋರಂ ಕೊರತೆಯಿಂದ ನಾಮಪತ್ರ ಪರಿಶೀಲನೆ ಸೇರಿದಂತೆ ಆಯ್ಕೆ ಪ್ರಕ್ರಿಯೆಯನ್ನು ಮುಂದೂಡಲಾಗಿದೆ. 16 ನಿರ್ದೇಶಕರ ಪೈಕಿ ಕೇವಲ 8 ನಿರ್ದೇಶಕರು ಹಾಜರಿದ್ದರು. ಅಧ್ಯಕ್ಷ ಸ್ಥಾನಕೆಕ ನಾಮಪತ್ರ ಸಲ್ಲಿಸಿದ ಚೊಕ್ಕಬಸವನಗೌಡ, ಉಪಾಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ ಐ.ದಾರುಕೇಶ ಆಯ್ಕೆ ಸಭೆ ವೇಳೆ ಗೈರಾಗಿದ್ದಾರೆ.**

। **ವಿಶ್ವಜೀತ್ ಮೆಹ್ತಾ,** ಚುನಾವಣಾಧಿಕಾರಿ, ಹೊಸಪೇಟೆ.

# ಮಕ್ಕಳ ಕಲಿಕೆಯಲ್ಲಿ ಪಾಲಕ ಪೋಷಕರ ಪಾತ್ರ ಮುಖ್ಯ

### ವಿಜಯನಗರ ಅಪರ ಜಿಲ್ಲಾಧಿಕಾರಿ ಅನುರಾಧ ಜಿ. ಹೇಳಿಕೆ




**ಹಂಪಿ ಟೈಮ್ಸ್ ಹೊಸಪೇಟೆ**
ಪೋಷಕರಿಗಾಗಿ ಪೋಷಣೆ ಕುರಿತು ಸೋಮವಾರ ವಿಜಯನಗರ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಹಮ್ಮಿಕೊಂಡ ಹಲೋ ಪೋಷಕರೇ ಕಾರ್ಯಕ್ರಮವು ಯಶಸ್ವಿಯಾಗಿ ನಡೆಯಿತು.
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಯುನಿಸೆಫ್ ಭಾರತ ಹಾಗೂ ಕಲಿಕೆ-ಟಾಟಾ ಟ್ರಸ್ಟ್ ಸಹಯೋಗದಲ್ಲಿ ಮಕ್ಕಳ ಕಲಿಕೆಯಲ್ಲಿ ಪಾಲಕ-ಪೋಷಕರ ಹೊಣೆ/ಪಾತ್ರವು ಅತಿ ಮುಖ್ಯವಾದದು ಎನ್ನುವ ನಿಟ್ಟಿನಲ್ಲಿ "ಹಲೋ ಪೋಷಕರೇ" ಪೋಷಕರಿಗಾಗಿ ಪೋಷಣೆ ಕುರಿತು ವಿನೂತ ಕಾರ್ಯಕ್ರಮವನ್ನು ರಾಜ್ಯದ ವಿಜಯನಗರ ಜಿಲ್ಲೆಯ ಹೊಸಪೇಟೆ ಹಾಗೂ ಹೂವಿನಹಡಗಲಿ ಶಿಶುಅಭಿವೃದ್ಧಿ ಯೋಜನೆಗಳಲ್ಲಿ ಹಾಗೂ ಕೊಪ್ಪಳ ಜಿಲ್ಲೆಯ ಕೊಪ್ಪಳ ಮತ್ತು ಗಂಗಾವತಿ ಶಿಶುಅಭಿವೃದ್ಧಿ ಯೋಜನೆಯ ವ್ಯಾಪ್ತಿಯ ಅಂಗನವಾಡಿಗಳಲ್ಲಿ ಗೂಗಲ್ ಮೀಟ್ ನ ವೀಡಿಯೋ ಕಾನ್ಸರೆನ್ಸ್ ಮೂಲಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ನಿರ್ದೇಶಕಿ ಅರ್ಚನಾ ಎಂ.ಎಸ್ ಅವರು ಕಾರ್ಯಕ್ರಮದ ಮಾಹಿತಿ ಪತ್ರ ಹಾಗೂ ಐ.ವಿ.ಆರ್.ಎಸ್ ಫೋನ್ ನಂಬರ್ 080-468382392 ನ್ನು ಬಿಡುಗಡೆಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.
ವಿಜಯನಗರ ಅಪರ ಜಿಲ್ಲಾಧಿಕಾರಿ ಅನುರಾಧ ಜಿ. ಅವರು ಹಲೋ ಪೋಷಕರೇ ಕಾರ್ಯಕ್ರಮದ ಮಾಹಿತಿ ಪತ್ರ ಬಿಡುಗಡೆಮಾಡಿದರು. ಬಳಿಕ ಮಾತನಾಡಿದ ಅವರು, ಬೆಳೆಯುವ ಸಿರಿ ಮೊಳಕೆಯಲ್ಲಿಯೇ ಎನ್ನುವ ಮಾತಿನಂತೆ 3 ರಿಂದ 6 ವರ್ಷದ ಮಕ್ಕಳ ಕಲಿಕೆಯು ಸಧೃಡವಾಗಲು ಪಾಲಕ-ಪೋಷಕರ ಪಾತ್ರವು ಮುಖ್ಯವಾದದು. ಆದ್ದರಿಂದ ಮಕ್ಕಳ ಬೆಳವಣಿಗೆಯ ಕುರಿತು ಪಾಲಕರಿಗೆ ಅರಿವು ಮೂಡಿಸುವಂತಹ ಕಾರ್ಯಕ್ರಮ ಇದಾಗಿದೆ. ಹಲೋ ಪೋಷಕರೇ ಕಾರ್ಯಕ್ರಮವನ್ನು ರಾಜ್ಯದಲ್ಲಿ ಹಾಗೂ ನಮ್ಮ ಜಿಲ್ಲೆಯಲ್ಲಿ ಅನುಷ್ಠಾನವಾಗುತ್ತಿದೆ. ಎಲ್ಲಾ ಪಾಲಕ-ಪೋಷಕರು ಇದರ ಸದುಪಯೋಗಪಡಿಸಿಕೊಳ್ಳಬೇಕು ಎಂದು ಹೇಳಿದರು.
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕಿ ಶ್ವೇತಾ ಎಸ್. ಅವರು ಮಾತನಾಡಿ, ವಿಜಯನಗರ ಜಿಲ್ಲೆಯಲ್ಲಿ ಕಲಿಕೆ-ಟಾಟಾ ಟ್ರಸ್ಟ್ ಮಾರ್ಗದರ್ಶನದಲ್ಲಿ ಅನುಷ್ಠಾನವಾಗುತ್ತಿದೆ. ಈ ಕಾರ್ಯಕ್ರಮದ ಪೂರಕವಾಗಿಯೇ ಮಕ್ಕಳ ಕಲಿಕೆಯಲ್ಲಿ ಪಾಲಕ-ಪೋಷಕರಿಗೆ ಅರಿವು ನೀಡುವಂತಹ ಕಾರ್ಯಕ್ರಮವಾಗಿದೆ. "ಹಲೋ ಪೋಷಕರೇ" ವಿನೂತನ ಪರಿಣಾಮಕಾರಿಯಾಗಿ ಅನುಷ್ಠಾನ ಮಾಡಲು ಕ್ರಮವಹಿಸಲಾಗುತ್ತದೆ ಎಂದರು.

>>3

# ಮಣ್ಣಿನ ಹಣತೆ ಖರೀದಿಸಿ ಮಹಿಳಾ ಸ್ವಸಹಾಯ ಸಂಘಗಳನ್ನ ಬಲಪಡಿಸಿ

### ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಎಂ.ಉಮೇಶ ಹೇಳಿಕೆ



**ಹಂಪಿ ಟೈಮ್ಸ್ ಹೊಸಪೇಟೆ**
ದೀಪ ಸಂಜೀವಿನಿ ಮೂಲಕ ಮಣ್ಣಿನ ಹಣತೆಗಳಿಗೆ ಪ್ರೋತ್ಸಾಹ ನೀಡಲಾಗುವುದು ಎಂದು ಹೊಸಪೇಟೆ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಎಂ.ಉಮೇಶ್ ಅವರು ಹೇಳಿದರು.
ವಿಜಯನಗರ ಜಿಲ್ಲಾ ಪಂಚಾಯತ್ ಸಂಜೀವಿನಿ-ಯೋಜನೆ ಹಾಗೂ ಹೊಸಪೇಟೆ ತಾಲ್ಲೂಕು ಪಂಚಾಯತ್ ಇವರ ವತಿಯಿಂದ ಬುಧವಾರ ನಗರದ ಹೃದಯ ಭಾಗವಾದ ತರಕಾರಿ ಮಾರುಕಟ್ಟೆ ಮುಂಭಾಗದಲ್ಲಿ ಹಮ್ಮಿಕೊಂಡಿದ್ದ ದೀಪ ಸಂಜೀವಿನಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ರಾಜ್ಯ ಸರ್ಕಾರದ ಸೂಚನೆಯಂತೆ, ಜಿಲ್ಲಾ ಪಂಚಾಯತ್ ಹಾಗೂ ಹೊಸಪೇಟೆ ತಾಲೂಕು ಪಂಚಾಯತ್ ಸಂಯೋಗದೊಂದಿಗೆ ಹೊಸಪೇಟೆ ತಾಲೂಕು ವ್ಯಾಪ್ತಿಯ ಎನ್.ಆರ್.ಎಲ್.ಎಂ-ಸಂಜೀವಿನಿ ಗ್ರಾಮ ಪಂಚಾಯಿತಿ ಒಕ್ಕೂಟದ ಮಹಿಳಾ ಸ್ವ ಸಹಾಯ ಸಂಘಗಳ ಸದಸ್ಯರು ತಯಾರಿಸಲಾದ ದೀಪಗಳನ್ನು ಮಾರಾಟ ಮಾಡಲು ಸೂಕ್ತ ಸ್ಥಳಾವಕಾಶ ಒದಗಿಸಿಕೊಡಲಾಗಿರುತ್ತದೆ. ಇದರಿಂದ ಸಂಘದ ಸದಸ್ಯರಿಗೆ ಆದಾಯ ಸೃಜನೆ ಆಗಲಿದೆ. ಇದರೊಂದಿಗೆ ದೀಪಾವಳಿ ಹಬ್ಬದಲ್ಲಿ ಜನರು ಖರೀದಿಸುವ ಸಿಹಿ ತಿಂಡಿಗಳು ಹಾಗೂ ದಿನಸಿ ಪದಾರ್ಥಗಳನ್ನು ಕೂಡ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಇದು ಜಿ.ಪಿ.ಎಲ್.ಎಫ್ ಮಹಿಳೆಯರಿಗೆ ಅನುಕೂಲವಾಗಲಿದೆ. ಸಾರ್ವಜನಿಕರು ಈ ಕಾರ್ಯಕ್ರಮದ ಉಪಯೋಗ ಪಡೆದು, ಮಹಿಳೆಯರು ತಯಾರಿಸುವ ಉತ್ತಮ ಗುಣಮಟ್ಟದ ಪದಾರ್ಥಗಳಿಗೆ ಪ್ರೋತ್ಸಾಹ ನೀಡಬೇಕು ಎಂದರು.
ಕಾರ್ಯಕ್ರಮದಲ್ಲಿ ಜಿ.ಪಂ. ಎನ್.ಆರ್.ಎಲ್.ಎಂ-ಸಂಜೀವಿನಿ ಯೋಜನೆಯ ಜಿಲ್ಲಾ ಕಾರ್ಯಕ್ರಮ ವ್ಯವಸ್ಥಾಪಕರು, ಜಿಲ್ಲಾ ವ್ಯವಸ್ಥಾಪಕರು, ಯುವ ವೃತ್ತಿಪರರು, ವಿಷಯ ನಿರ್ವಾಹಕರು, ತಾ.ಪಂ ಎನ್.ಆರ್.ಎಲ್.ಎಂ-ತಾಲೂಕು ಕಾರ್ಯಕ್ರಮ ವ್ಯವಸ್ಥಾಪಕರು, ವಲಯ ಮೇಲ್ವಿಚಾರಕರು, ತಾಲ್ಲೂಕು ಕೃಷಿ ಜೀವನೋಪಾಯ ವ್ಯವಸ್ಥಾಪಕರು, ಹೊಸಪೇಟೆ ತಾಲೂಕಿನ ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ ಮಹಿಳೆಯರು ಭಾಗವಹಿಸಿದ್ದರು.
ಹೊಸಪೇಟೆ ತಾಲ್ಲೂಕಿನ ಚಿಲಕನಹಟ್ಟಿ ಹಾಗೂ ಕಲ್ಲಹಳ್ಳಿ ಸಂಜೀವಿನಿ ಗ್ರಾಮ ಪಂಚಾಯತಿ ಮಟ್ಟದ ಒಕ್ಕೂಟದ ಸ್ವ ಸಹಾಯ ಸಂಘದ ಮಹಿಳೆಯರು ಮಣ್ಣಿನಿಂದ ತಯಾರಿಸಿದ ಮಣ್ಣಿನ ಹಣತೆಯ ದೀಪಗಳನ್ನು ದೀಪ ಸಂಜೀವಿನಿ ಕಾರ್ಯಕ್ರಮದ ಮೂಲಕ ಮಾರಾಟದಲ್ಲಿ ಭಾಗವಹಿಸಿದ್ದರು.


**ದೀಪಾವಳಿ ಹಬ್ಬದಲ್ಲಿ ಜನರು ಖರೀದಿಸುವ ಸಿಹಿ ತಿಂಡಿಗಳು ಹಾಗೂ ದಿನಸಿ ಪದಾರ್ಥಗಳನ್ನು ಕೂಡ ಮಾರಾಟ ಮಾಡಲು ಅವಕಾಶ ಕಲ್ಪಿಸಲಾಗಿದ್ದು, ಇದು ಜಿ.ಪಿ.ಎಲ್.ಎಫ್ ಮಹಿಳೆಯರಿಗೆ ಅನುಕೂಲವಾಗಲಿದೆ.**

– **ಎಂ.ಉಮೇಶ,** ಇಒ ತಾಪಂ

ಕನ್ನಡ ಡಿಂಡಿಮ

# ಕನ್ನಡವನ್ನು ತಲೆ ಮೇಲೆ ಹೊತ್ತು ತಿರುಗಿದ : ಗಳಗನಾಥ

ಬಳ್ಳಾರಿಯ ಬಿರು ಬೇಸಿಗೆಯ ಸಮಯದಲ್ಲಿ ಒಂದು ರದ್ದಿ ಅಂಗಡಿ ಮುಂದಿರುವ ಕಲ್ಲಿನ ಬೆಂಚಿನ ಮೇಲೆ ಬೀಚಿ ಮತ್ತು ಕಾಳಿಂಗರಾಯರು ಕೂತುಕೊಂಡು ಮಾತನಾಡುತ್ತಿದ್ದಾರೆ. ಆ ಸಮಯಕ್ಕೆ ಒಬ್ಬ ವಯಸ್ಸಾದ ವ್ಯಕ್ತಿ ತನ್ನ ಹೆಗಲ ಮೇಲೆ ಒಂದು ಚೀಲವನ್ನು ಹೊತ್ತುಕೊಂಡು ಬಂದು,



"ಕನ್ನಡದ ಪುಸ್ತಕಗಳಿವೆ. ಉಪಯೋಗಕ್ಕೆ ಬರುತ್ತವೆ, ತಗೋತೀರೇನ್ರಿ" ಎಂದು ಕೇಳಿದ. ಆ ಇಬ್ಬರೂ ಆ ಮುದುಕನ ಮಾತಿಗೆ ಗಮನ ಕೊಡದೆ ತಮ್ಮ ಪಾಡಿಗೆ ತಾವು ಚರ್ಚೆ ನಡೆಸುತ್ತಿದ್ದರು. ಆತ ಮತ್ತೊಮ್ಮೆ ಕೇಳುತ್ತಾನೆ. ಆಗ ರದ್ದಿ ಅಂಗಡಿಯ ಮಾಲಿಕ,

"ಇಲ್ಲಿಯೇ ಸಾಕಷ್ಟು ರದ್ದಿ ಬಿದ್ದಿದೆ ಹೋಗೋ. . .ನಿನ್ನ ಪುಸ್ತಕ ಯಾರಿಗೆ ಬೇಕು" ಎಂದು ಬೈದು ಮುಂದಕ್ಕೆ ಕಳಿಸಿದ.

ಆ ಮುದುಕ "ಇರಲಿ. .ಇರಲಿ. .ಪರವಾಗಿಲ್ಲ. ಹೋಗುತ್ತೇನೆ" ಎಂದು ಮುಂದೆ ನಡೆದರು.

ಬೀಚಿ ಮತ್ತು ರಾಯರು ಅಂದು ಸಂಜೆ ಕೆರೆಯ ಮೇಲೆ ವಾಕಿಂಗ್ ಮಾಡುತ್ತಿದ್ದರು. ಅಲ್ಲಿ ಅವರಿಗೆ ಅಚ್ಚರಿಯಾಗಿತ್ತು. ಯಾವ ವೃದ್ಧ ಪುಸ್ತಕ ಹೊತ್ತು ಕೊಂಡು ಬೆಳಿಗ್ಗೆ ಬಂದಿದ್ದ, ಆತ ಪುಸ್ತಕದ ಗಂಟನ್ನು ಮೇಲುಗಡೆ ಇಟ್ಟು, ಆ ಕೆರೆಯಲ್ಲಿ ಸ್ನಾನ, ಸಂಧ್ಯಾವಂದನೆ ಸಲ್ಲಿಸುತ್ತಿದ್ದ.

ಇವರಿಗೆ ಇನ್ನಷ್ಟು ಕುತೂಹಲ ಹೆಚ್ಚಾಗಿ, ವೃದ್ಧರಿಗೆ ತುಂಬಾ ಕಷ್ಟ ಇರಬೇಕು, ಹಾಗಾಗಿ ರದ್ದಿ ಪುಸ್ತಕ ಹೊತ್ತುಕೊಂಡು ಮಾರುತ್ತಾ ಜೀವನ ಸಾಗಿಸುತ್ತಿದ್ದಾರೆ ಎನ್ನುವ ಭಾವನೆ ಮೂಡಿತು. ಜೊತೆಗೆ ಅವರ ಮೇಲೆ ಕನಿಕರವೂ ಮೂಡಿತು. ಆತನನ್ನು ಅವರು ಮಾತನಾಡಿಸಿದರು.

'ತಾವು ಯಾರು?' ಎಂದು ಕೇಳಿದರು. ಆದರೆ ಅ ವಯಸ್ಸಾದ ವ್ಯಕ್ತಿ ಇವರಿಗೆ ಏನೂ ಉತ್ತರ ಕೊಡದೆ, ತನ್ನ ಪುಸ್ತಕದ ಗಂಟನ್ನು ಬಿಚ್ಚಿ, ಪುಸ್ತಕಗಳ ಮತ್ತು ಹಣದ ಲೆಕ್ಕ ಹಾಕಲು ಆರಂಭಿಸಿದ. ಗಂಟಿನಲ್ಲಿರುವ ಪುಸ್ತಕಗಳನ್ನು ನೋಡಿ ಆ ಇಬ್ಬರೂ ಅವಾಕ್ಕಾದರು. ಅಲ್ಲಿ ರದ್ದಿ ಪುಸ್ತಕಗಳಿರಲಿಲ್ಲ. ಡಿವಿಜಿ, ಗಳಗನಾಥ. . .ಮುಂತಾದವರ ಹೊಸ ಹೊಸ ಪುಸ್ತಕಗಳಿದ್ದವು. ಈ ಅಜ್ಜ ಇಂತಹ ಪುಸ್ತಕ ಮಾರಾಟ ಮಡುತ್ತಿರುವವನಲ್ಲ! ಎಂದು ಅವರಿಗೆ ವೃದ್ಧರ ಮೇಲೆ ಅಭಿಮಾನ ಹೆಚ್ಚಾಯಿತು.

ಮತ್ತೆ 'ನೀವು ಯಾರು ?' ಎಂದು ದುಂಬಾಲು ಬಿದ್ದು ಕೇಳಿದರು. ಆ ವ್ಯಕ್ತಿ ಪುಸ್ತಕದ ಗಂಟನ್ನು ಕಟ್ಟಿ, ಹೆಗಲ ಮೇಲೆ ಹೊತ್ತುಕೊಂಡು ಮುಂದಕ್ಕೆ ಹೊರಡಲು ಸಿದ್ಧನಾಗಿ, ಇಬ್ಬರನ್ನು ನಗು ಮುಖದಿಂದ ನೋಡುತ್ತಾ "ನನ್ನನ್ನು ಗಳಗನಾಥ ಎಂದು ಕರೆಯುತ್ತಾರೆ" ಎಂದಾಗ. ಬೀಚಿ ಮತ್ತು ಕಾಳಿಂಗರಾಯರ ಕಣ್ಣುಗಳಲ್ಲಿ ಆನಂದ ಬಾಷ್ಪ ಸುರಿಯಲಾರಂಭಿಸಿ, ಆ ವೃದ್ಧನಿಗೆ ತಕ್ಷಣವೇ ಸಾಷ್ಟಾಂಗ ನಮಸ್ಕಾರ ಮಾಡಿದರು. ಕಾಲನಂತರ ಬೀಚಿಯವರು ಆರೋಗ್ಯ ತುಂಬಾ ಹದಗೆಟ್ಟಿದ್ದರೂ ಚಿಂತಾಮಣಿಯಲ್ಲಿ ನಡೆದ ಕಾರ್ಯಕ್ರಮಕ್ಕೆ ಹೋಗುತ್ತಾರೆ. ಅಲ್ಲಿ ಸಂಘಟಕರು "ಇಂತಹ ಸಮಯದಲ್ಲಿ ನಿಮಗೆ ಇದು ಅಗತ್ಯವಿತ್ತೇ? ನೀವು ದೊಡ್ಡವರು, ನಿಮ್ಮ ಕನ್ನಡ ಪ್ರೇಮ ಮೆಚ್ಚುವಂತಹದ್ದು" ಎಂದು ಹೇಳುತ್ತಾರೆ. ಆಗ ಕನ್ನಡದ ಹಾಸ್ಯ ಬ್ರಹ್ಮ 'ನಾನಲ್ಲ ದೊಡ್ಡ ಮನುಷ್ಯ. ಗಳಗನಾಥರಂತವರು ದೊಡ್ಡ ಮನುಷ್ಯರು. ನಮ್ಮಂತವರ ಪುಸ್ತಕಗಳನ್ನು ಹೊತ್ತುಕೊಂಡು, ಮನೆಮನೆಗೂ ಮುಟ್ಟಿಸಿದರಲ್ಲ. . ಅದರಿಂದಾಗಿ ಇಂದು ಕನ್ನಡ ಉಳಿದಿದೆ' ಎಂದು ಹೇಳುತ್ತಾ, ಈ ಮೇಲಿನ ಘಟನೆಯನ್ನು ಹೇಳುತ್ತಾರೆ.

। ಡಾ.ಪರಮೇಶ್ವರಯ್ಯ ಸೊಪ್ಪಿಮಠ

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

ಸಂಪಾದಕರು

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com

# 73ನೇ ನಂಬರಿನ ಮನೆ



(ಪಟದಲ್ಲಿ: ರಾಮು, ತುಕಾರಾಂ, ನಾನು, ಓ.ಎಲ್. ನಾಗಭೂಷಣಸ್ವಾಮಿ)



ರಹಮತ್ ತರೀಕೆರೆ
ಸಂಸ್ಕೃತಿ ಚಿಂತಕರು

ಮೈಸೂರಿಗೆ ಹೋದಾಗಲೆಲ್ಲ ಸರಸ್ವತೀಪುರದ ಏಳನೇ ಮೇನಿನ 73ನೇ ಸಂಖ್ಯೆಯ ಮನೆಗೆ ಹೋಗುತ್ತೇನೆ. ಇದು ಭವಿಷ್ಯದಲ್ಲಿ ನನಗೆ ತಿಳುವಳಿಕೆ ಊಟ ಪ್ರೀತಿ ಕೊಡುವ ಬೆಚ್ಚನೆಯ ಗೂಡಾದೀತೆಂಬ ಕಲ್ಪನೆಯೇ ಇರದೆ, ನಲವತ್ತು ವರ್ಷಗಳ ಹಿಂದೆ ಇದರ ಬದಿಯಿಂದಲೇ ಹಾಸ್ಟೆಲಿನಿಂದ ಮಾನಸಗಂಗೋತ್ರಿಗೆ ಓಡಾಡುತ್ತಿದ್ದೆ. ಈ ಮನೆಯಲ್ಲಿ ಒಂದು ಕೂಡು ಕುಟುಂಬವಿದೆ. ಮಹಡಿ ಕೋಣೆಯಲ್ಲಿ ರಾಮು ಅಲಿಯಾಸ್ ಟಿ.ಎಸ್.ರಾಮಸ್ವಾಮಿ ನೆಲೆಸಿದ್ದಾರೆ. ಶ್ರೀಯುತರು ಹಿಂದೆ 'ಆಂದೋಲನ'ದ ರವಿವಾರದ ಪುರವಣಿ ಹಾಡುಪಾಡು ನೋಡಿಕೊಳ್ಳುತ್ತಿದ್ದರಿಂದ, ಮಾಜಿ ಪತ್ರಕರ್ತ ಎನ್ನಬಹುದು. ಇವರ ಕೋಣೆಗೆ ಲಗತ್ತಾಗಿ ಕತೆಗಾರ ತುಕಾರಾಮರ ಸಂಸಾರ; ಇದರಡಿ ಸಂಗೀತದಲ್ಲೂ ಅನುವಾದದಲ್ಲೂ ಕೆಲಸ ಮಾಡಿರುವ ವೇಣುಗೋಪಾಲ್-ಶೈಲಜ ದಂಪತಿಗಳ ಕೋಣೆ. ಇನ್ನೊಂದರಲ್ಲಿ ರಾಮು ತಂಗಿ ಕುಮುದಾ ಇರುತ್ತಿದ್ದರು. ಮತ್ತೊಂದರಲ್ಲಿ ಅಮ್ಮ. ನಡುವಿರುವ ಅನುಭವ ಮಂಟಪದಂತಹ ಪುಟ್ಟ ಹಾಲು, ಮನೆಗೆ ಬಂದು ಹೋಗುವವರು ಕೂಡುವ ವೇದಿಕೆ.

ರಾಮು ನನಗೆ ಮೇಷ್ಟ್ರಾದ ಓ.ಎಲ್. ನಾಗಭೂಷಣ ಸ್ವಾಮಿಯವರ ಸಹಪಾಠಿಯಾದ ಕಾರಣ, ಗುರುಸಮಾನರು. ಆದರೆ ಅವರಿತ್ತ ಸಲಿಗೆ ಬಳಸಿ ಸಮವಯಸ್ಕರನ್ನು ಕರೆವಂತೆ ನಾನು ರಾಮು ಎಂದೇ ಕರೆಯುತ್ತೇನೆ. ಮೈಸೂರಿನ ಆಬಾಲ ವೃದ್ಧರೂ ಹೀಗೇ ಸಂಬೋಧಿಸುವರು. ನನ್ನದೊಂದು ಪುಸ್ತಕ ಅವರಿಗೆ ಅರ್ಪಿಸಿದೆ: 'ತಾಯಿ ಗುರು ಗೆಳೆಯ ಪ್ರೇಮಿ ರಾಮುಗೆ' ಎಂದು. ರಾಮು ಸ್ನೇಹವಾದ ಬಳಿಕ ಬರವಣಿಗೆಯ ಅನೇಕ ಪಾಠಗಳನ್ನು ಕಲಿತೆ. ಅವರಿಂದ ಕತ್ತಿ ಅಲುಗಿನ ಹೊಡೆತದಂತಹ ನಿಷ್ಠುರ ವಿಮರ್ಶೆಯೂ, ಜೇನನ್ನು ತೆಗೆದು ನಾಲಗೆ ಮೇಲಿಟ್ಟಂತಹ ಮೆಚ್ಚುಗೆಯೂ ಒಟ್ಟಿಗೆ ದೊರಕಿದವು. ಆಗ ಪ್ರಜಾವಾಣಿಗೆ 'ನಡೆದಷ್ಟೂ ನಾಡು' ಅಂಕಣ ಬರೆಯುತ್ತಿದ್ದೆ. ಜನಪ್ರಿಯವಾಗಿತ್ತು. ವರ್ಷ ಕಾಲ ಬರೆದ ಬಳಿಕ ರಾಮು ಹೇಳಿದರು: 'ಸಾ, ಈಗ ಹೊಸತೇನೂ ಹೇಳ್ತಿಲ್ಲ. ಬರೀಬೇಕಲ್ಲ ಅಂತ ಬರೀತಿರೋ ಹಂಗಿದೆ. ನಿಲಿಸಿಬಿಡಿ'. ನಾನು ಬರೆದಿದ್ದು ಇಷ್ಟವಾದರೆ ಒಂದು ಸಾಲಿನ ಪ್ರತಿಕ್ರಿಯೆ ಬರುತ್ತದೆ: 'ನಿಮ್ಮ ಗದ್ಯ ಬೊಡ್ಡಿಮಗಂದು ಒಳ್ಳೆ ಕಾವ್ಯ ಇದ್ದಂಗದೆ. ನೀವು ನಾವೆಲ್ ಬರೀಬೇಕು ಸಾ'. ಮೊದಮೊದಲು ನನ್ನ ಪುಸ್ತಕಗಳನ್ನು ಪ್ರೀತಿಯ ರಾಮು ಅವರಿಗೆ ಎಂದಷ್ಟೆ ಬರೆದು ಕಳಿಸುತ್ತಿದ್ದೆ. ನಂತರ '73ನೇ ನಂಬರಿನ ಮನೆಯ ಸರ್ವಸದಸ್ಯರಿಗೆ' ಎಂದು ಬರೆದು ಕಳಿಸುತ್ತಿದ್ದೇನೆ. ಇದಕ್ಕೊಂದು ಕಾರಣವೂ ಇದೆ. ಕಣ್ಣಿನ ಸಮಸ್ಯೆಯಿಂದ ರಾಮುಗೆ ಹೆಚ್ಚು ಓದಲಾಗುತ್ತಿಲ್ಲ. ಆದರೂ ಸಾಫ್ಟ್ ಕಾಪಿ ತರಿಸಿಕೊಂಡು, ಅಕ್ಷರ ಹಿಗ್ಗಿಸಿ ಓದುವರು. ಕೊನೆಗೆ ಮಂಜುಗಣ್ಣಿನ ರಾಮು ಎಂದು ಸಹಿಯಿರುವ ಈಮೇಲ್ ಕಳಿಸುವರು. ಇದು ನನ್ನನ್ನು ದುಗುಡದ ಮಂಜಿನಲ್ಲಿ ಮುಳುಗಿಸುತ್ತದೆ. ಪ್ರೀತಿಯ ತಂಗಿ ಕುಮುದಾ ಅಪಘಾತದಲ್ಲಿ ಕಣ್ಮರೆಯಾದ ಬಳಿಕ, ರಾಮು ಇಳಿದುಹೋದರು.

ನಾನು ಹಲವಾರು ವಿದ್ವಾಂಸರ ಚಳುವಳಿಗಾರರ ಸಂದರ್ಶನ ಮಾಡಿ ಪ್ರಕಟಿಸಿದೆ. ಈ ಸಾಲಿನಲ್ಲಿ ರಾಮುದೂ ಸೇರಬೇಕೆಂದು ಬಯಸಿದೆ. ಒಪ್ಪಿಸಿದೆ ಕೂಡ. ಕಿಕ್ಕೇರಿ ನಾರಾಯಣರ ತೋಟದ ಮನೆಗೆ ಕರೆದುಕೊಂಡು ಹೋಗಿ, ಊಟವೆಲ್ಲ ಮುಗಿದ ಬಳಿಕ, ಹಾಸಿದ ಚಾಪೆಯ ಮೇಲೆ ಕೂರಿಸಿ, ಹೊಂಚಿನಿಂದ ಮೊದಲ ಪ್ರಶ್ನೆ ಹಾಕಿದೆ. ಪ್ರಶ್ನೆಯಲ್ಲಿದ್ದ ಔಪಚಾರಿಕತೆ ಕೃತಕವೆನಿಸಿತೊ ಏನೊ? ಉತ್ತರ ಕೊಡುವ ಬದಲು 'ಸಾಸಾ...ನಿಮ್ಮ ಕಾಲಿಗೆ ಬೀಳ್ತೀನಿ. ಬ್ಯಾಡಸಾ' ಎಂದವರೆ, ಕ್ಯಾಸೆಟ್ಟಿನ ಟೇಪನ್ನು ಹೊರಗೆ ಸೆಳೆದುಬಿಟ್ಟರು. ಅವರಿಷ್ಟಕ್ಕೆ ವಿರುದ್ಧವಾಗಿ ಮಾತಾಡಿಸಬೇಕೆಂದು ಅನಿಸಲಿಲ್ಲವಾಗಿ ಮತ್ತೆ ಒತ್ತಾಯಿಸಲಿಲ್ಲ. ಆದರೆ ರಾಮು, 73ನೇ ನಂಬರಿನ ಮನೆಯಲ್ಲಿ ಅನೇಕ ಮಹನೀಯರ ಸಂದರ್ಶನಕ್ಕೆ ಅವಕಾಶ ಕಲ್ಪಿಸಿದರು. ದೇವನೂರರ ಸಂದರ್ಶನಕ್ಕಾಗಿ ತಮ್ಮ ಕೋಣೆ ಸ್ವಚ್ಛಮಾಡಿ, ಊದುಬತ್ತಿ ಹಚ್ಚಿ, ತಿನ್ನಲು ಹಣ್ಣಿಟ್ಟು, ಎದುರುಬದುರು ಕುರ್ಚಿಯಿಟ್ಟು ಕೂರಿಸಿದರು. ಇದು ನವದಂಪತಿಯನ್ನು ಸಿಂಗರಿಸಿದ ಸಜ್ಜೆಮನೆಯೊಳಗೆ ಕೂಡಿ ಹಾಕಿದಂತಿತ್ತು. ಮಾತುಕತೆ ಮುಗಿವ ತನಕ ಕೆಳಗೆ ಮೆಟ್ಟಿಲ ಬಳಿ ನಿಂತು ಯಾರನ್ನೂ ಮೇಲಕ್ಕೆ ಬಿಡಲಿಲ್ಲ.

ರಾಮು, ಕನ್ನಡ ಸಾಹಿತ್ಯದ ಬಹಳ ಜನಕ್ಕೆ ಗೊತ್ತಿಲ್ಲದ ಗುಪ್ತಸಾಧಕ. ಅವರಷ್ಟು ಪ್ರಮಾಣದಲ್ಲಿ ಸಾಹಿತ್ಯ ಓದಿಕೊಂಡಿರುವವರು, ಸೂಕ್ಷ್ಮ ಚಿಂತನೆ ಮಾಡಿರುವವರು ವಿಶ್ವವಿದ್ಯಾಲಯಗಳಲ್ಲಿ ವಿರಳ. ನಮ್ಮ ಎಷ್ಟೊ ಪ್ರೊಫೆಸರುಗಳಿಗೆ ರಾಮು ವಿದ್ವತ್ತಿನ ಕಿಂಚಿತ್ ಪ್ರಮಾಣವಿದ್ದರೂ ಅವು ಜ್ಞಾನದಿಂದ ಬೆಳಗುತ್ತಿದ್ದವು. ರಾಮು ಜತೆ ಸಾಹಿತ್ಯದ ಚರ್ಚೆ ನಡೆಸುವುದೆಂದರೆ, ಹೊಳಹುಗಳ ಸುರಿಮಳೆಗೆ ಮೈಯೊಡ್ಡಿ ಕೂತಂತೆ. ತೋಂಡಿ ಸಮುದಾಯಕ್ಕೆ ಸೇರಿದ ಅವರು ಓದಿಕೊಂಡಿರುವುದಕ್ಕೆ ಹೋಲಿಸಿದರೆ ಬರೆದಿದ್ದು ಕಡಿಮೆ. ಪ್ರಕಟಿಸಿರುವುದು ಮತ್ತೂ ಸ್ವಲ್ಪ. ಕವಿತೆಗಳಂತೂ ಈಗಷ್ಟೆ ಅರಳಿದ ಚಿಗುರಿನಂತಿವೆ. ಕುಮಾರವ್ಯಾಸ ಮತ್ತು ಪಂಪನ ಬಗ್ಗೆ ಒಳನೋಟವುಳ್ಳ ಅವರ ಲೇಖನಗಳನ್ನು ಪ್ರಕಟಿಸುವ ಅವಕಾಶ, 'ಕನ್ನಡ ಅಧ್ಯಯನ' ಪತ್ರಿಕೆ ಸಂಪಾದಿಸುವಾಗ ನನಗೆ ಸಿಕ್ಕಿತ್ತು.

73ನೇ ನಂಬರಿನ ಮನೆ ಧರ್ಮಛತ್ರ ಕೂಡ. ನಾನೂ ಬಾನೂ ಇಲ್ಲಿ ಅದೆಷ್ಟು ಬಾರಿ ಉಂಡಿದ್ದೇವೆ? ಇಲ್ಲಿ ಅನೇಕ ಪಾಕಪ್ರವೀಣರಿದ್ದಾರೆ. ಅವರಲ್ಲೆಲ್ಲ ಅಮ್ಮನ ಕೈವಾಡವೇ ಮಿಗಿಲು. ಅವರು ಬಂದುಹೋಗುವ ಸರ್ವರ ಯೋಗಕ್ಷೇಮ ವಿಚಾರಿಸುತ್ತಾರೆ. ಸಣ್ಣದನಿಯಲ್ಲಿ 'ಚೆನ್ನಾಗಿದೀರಾ? ಬಾನು ಹೆಂಗಿದ್ದಾರೆ? ಯಾವಾಗ ಬಂದಿರಿ?'-ಎರಡೊ ಮೂರೊ ಮಾತು. ಮುಖದ ಪ್ರಸನ್ನತೆ, ಕಾಫಿ, ದೋಸೆಚಟ್ನಿ, ಪೊಂಗಲುಗಳಷ್ಟೇ ಆಪ್ತ. ಕಚ್ಚೆ ಸೀರೆಯುಟ್ಟು ಒಂದು ಕಾಲದ ಸುಂದರಿಯಾಗಿದ್ದ ಮತ್ತು ಸಾಂಪ್ರದಾಯಿಕವಾಗಿ ಕಾಣುವ ಅಮ್ಮ, ಮಕ್ಕಳು ಬೇರೆಬೇರೆ ಜಾತಿಧರ್ಮಗಳಲ್ಲಿ ಮದುವೆ ಆಗಿರುವುದನ್ನು ಸಹಜ ಸ್ವೀಕರಿಸಿದ್ದಾರೆ.

73ನೇ ನಂಬರಿನ ಮನೆ ಅನೇಕ ಲೇಖಕರಿಗೂ ಸಾಹಿತ್ಯಾಭ್ಯಾಸಿಗಳಿಗೂ ಗುರುಮಠ. ಇಲ್ಲಿಗೆ ಬಂದುಹೋಗಿರುವ ಲೇಖಕರು ನೂರಾರು. ದೇವನೂರರು ಮನೆ ಮತ್ತು ತೋಟದಲ್ಲಿ ಸಿಗದಿದ್ದರೆ ರಾಮು ಮನೆಯಲ್ಲಿ ಗ್ಯಾರಂಟಿ. ನಾನಲ್ಲಿ ತುಕಾರಾಂ ಜತೆ ಆರೂಢ ಪಂಥ ಮತ್ತು ಅಂಬೇಡ್ಕರ್ ಚಿಂತನೆಗಳನ್ನು ಚರ್ಚಿಸಿದ್ದೇನೆ; ವೇಣು-ಶೈಲಜರೊಟ್ಟಿಗೆ ಸಂಗೀತ, ರಂಗಭೂಮಿ ಬಗ್ಗೆ ಮಾತುಕತೆಯಾಡಿದ್ದೇನೆ; ರಾಮು ಜತೆ ಕನ್ನಡ ಕಾವ್ಯ ಮತ್ತು ಆಧುನಿಕ ವಿಮರ್ಶೆಯ ಜಿಜ್ಞಾಸೆ ನಡೆಸಿದ್ದೇನೆ; ಪಂಪ ಕುಮಾರವ್ಯಾಸ ಬೇಂದ್ರೆ ಬಗ್ಗೆ ಒಳನೋಟಗಳನ್ನು ಕೇಳಿಸಿಕೊಂಡಿದ್ದೇನೆ. ರಾಜಕಾರಣ ಸಂಗೀತ ಸಾಹಿತ್ಯ ಭಾಷೆಗಳ ಬಗ್ಗೆ ಇಷ್ಟೊಂದು ಪ್ರಮಾಣದ ಚರ್ಚೆ ಆಲಿಸಿರುವ ಮತ್ತೊಂದು ಮನೆ ಮೈಸೂರಲ್ಲಿ ಇದ್ದಂತಿಲ್ಲ.

'ಕಾನೂರು ಹೆಗ್ಗಡಿತಿ'ಯಲ್ಲಿ ಕಾನೂರು ಮನೆಯ ಅಡುಗೆಕೋಣೆಯ ವರ್ಣನೆಯಿದೆ. ಇಲ್ಲಿರುವ ಕಡೆಗೋಲು ಕಂಬಕ್ಕೆ ಮಾತು ಬಂದರೆ, ಏನೆಲ್ಲ ಕಲಹ ಮೈತ್ರಿ ಏರ್ಪಡಬಹುದೊ ಎಂದು ಕಾದಂಬರಿ ವಿಸ್ಮಯದಿಂದ ನಿರೂಪಿಸುತ್ತದೆ. ಇದರಂತೆ 73ನೇ ನಂಬರಿನ ಮನೆಯ ಗೋಡೆಗಳಿಗೆ ಬಾಯಿ ಬಂದರೆ, ಅವು ಹೇಳುವ ರಾಜಕೀಯ ಸಾಮಾಜಿಕ ಸಾಹಿತ್ಯಕ ಚರ್ಚೆಗಳು ನೂರಾರು ಸಂಪುಟವಾದಾವು. ಅವು ಒಂದೊಮ್ಮೆ ಪ್ರಕಟವಾಗಿ ಕನ್ನಡಿಗರೇನಾದರೂ ಓದಿದರೆ, ಇರುವ ಸರ್ಕಾರಗಳು ಉರುಳಿ ಹೊಸ ಸರ್ಕಾರಗಳು ಅಸ್ತಿತ್ವಕ್ಕೆ ಬರಬಹುದು. ಕ್ರಾಂತಿಯೇ ಸಂಭವಿಸಬಹುದು.

ಇಷ್ಟೊಂದು ಕ್ರಾಂತಿಕಾರಕವಾದ ಮನೆಯಲ್ಲಿ ಒಂದು ದೊಡ್ಡ ಸಮಸ್ಯೆಯಿದೆ. ಅದು ಬ್ರಹ್ಮಚಾರಿ ರಾಮು ಸಾಕಿರುವ ಬೆಕ್ಕುಗಳದ್ದು. ಅವು ಯಾರಾದರೂ ಅತಿಥಿಗಳು ಬಂದೊಡನೆ, ಗಬಕ್ಕನೆ ಹೋಗಿ ಕುರ್ಚಿಗಳಲ್ಲಿ ತಾವೇ ಆಸೀನವಾಗಿಬಿಡುತ್ತವೆ. ರಾಮು ಮಾತನಾಡುತ್ತಿದ್ದರೆ ಅಸೂಯೆಯಿಂದ ನಾನಾ ಬಗೆಯಲ್ಲಿ ಅಡಚಣೆ ಒಡ್ಡುತ್ತವೆ-ತಾವಷ್ಟೇ ಹಕ್ಕುದಾರರೆಂಬಂತೆ. ಈ ಮನೋಭಾವ ಬೆಕ್ಕುಗಳದ್ದು ಮಾತ್ರವಲ್ಲ, ರಾಮು ಜತೆ ಗುರುತಿಸಿಕೊಳ್ಳುವ ಬಹಳಷ್ಟು ಗೆಳೆಯರದ್ದೂ ಎಂದು ನನಗೆ ಬಳಿಕ ಗೊತ್ತಾಯಿತು.

ಮೈಸೂರನ್ನು ತಮ್ಮ ಚಟುವಟಿಕೆ-ಮಾತುಕತೆಗಳಿಂದ ಜೀವಂತವಿಟ್ಟಿದ್ದ ಪ. ಮಲ್ಲೇಶ್, ಜಿ.ಎಚ್.ನಾಯಕ, ರಾಮು- ಆರು ತಿಂಗಳಲ್ಲಿ ಒಬ್ಬೊಬ್ಬರಾಗಿ ಕಣ್ಮರೆಯಾದರು. ರಾಮು ಸಾವು, ಅವರ ದೇಹಸ್ಥಿತಿ ಬಲ್ಲವರಿಗೆ ಅನಿರೀಕ್ಷಿತವಲ್ಲ. ಕಳೆದ ಕೆಲವು ವರ್ಷಗಳಿಂದ ಅವರು ಪಡುತ್ತಿದ್ದ ಯಾತನೆ ಕಂಡರೆ, ಸಾವು ಬಿಡುಗಡೆಯಾಗಿ ಕೂಡ ಬಂದಿದೆ ಎಂದೂ ಅನಿಸುತ್ತದೆ. ನಾವು ಪ್ರೀತಿಸುವವರು ನಮ್ಮೊಂದಿಗೆ ಇರಬೇಕು, ನರಳುತ್ತ ಅಲ್ಲ. ಸಾವಿನ ನಂತರ ಒಬ್ಬ ವ್ಯಕ್ತಿ ತನ್ನ ಜೀವಿತ ಕಾಲದಲ್ಲಿ ಆಸುಪಾಸಿನ ಪರಿಸರವನ್ನು ಹೇಗೆ ಜೀವಂತವಾಗಿಟ್ಟಿದ್ದರು ಎಂಬ ಆಪ್ತ ನೆನಹೇ, ಅವರನ್ನು ಕಳೆದು ಮರುಹುಟ್ಟಿಸಿಕೊಳ್ಳುವ ಪರಿ. ಈ ಲೆಕ್ಕದಲ್ಲಿ, ನಮ್ಮ ಕಾಲದಲ್ಲಿ ಯಾವುದೇ ಅಧಿಕಾರದಲ್ಲಿಲ್ಲದ, ಹೆಚ್ಚೇನೂ ಬರೆಯದ, ಕೇವಲ ತನ್ನ ಪ್ರೀತಿ ವಿಶ್ವಾಸಗಳಿಂದ ಹೀಗೆ ಸಾವಿರಾರು ಜನರಿಗೆ ಹೀರೋ ಆದವರು ಯಾರಿದ್ದಾರೆ? ವಿದ್ವತ್ತು, ಸಾಹಿತ್ಯಕ ಸಂವೇದನೆ, ಜಾತ್ಯತೀತತೆ, ಮಾನವೀಯತೆ, ರಾಜಕೀಯ ಪ್ರಜ್ಞೆ, ವಿನೋದಗಳೆಲ್ಲವೂ ಅವರಲ್ಲಿ ಏಕೀಭವಗೊಂಡಿದ್ದವು.

ನಾನು ಎಂ.ಎ. ಪಿಎಚ್‌ಡಿ ಪದವಿಗಳನ್ನು ಪಡೆದಿದ್ದು ಮಾನಸಗಂಗೋತ್ರಿಯಲ್ಲಿ. ಆದರೆ ತುಸು ಸಾಹಿತ್ಯಕ ಸಂವೇದನೆ ಗಳಿಸಿದ್ದು ರಾಮುವಿನ ಗುರುಕುಲದಲ್ಲಿ. ರಾಮು ಎನ್ನುವುದು ಏಕವಚನವಲ್ಲ; ಸ್ವರಸ್ವತೀಪುರಂನ 79ನೇ ನಂಬರಿನ ಮನೆಯ ರಾಮು ತುಕಾರಾಂ ಶೈಲಜ ವೇಣು ಅಮ್ಮ, ಕುಮುದಾ ರಾಜಲಲಕ್ಷ್ಮಿ ರಾಘು ಮುಂತಾದವರು ಸೇರಿದ ಬಹುವಚನ. ಈ ಕೂಡುಕುಟುಂಬದಲ್ಲಿ ನಾನು ನೂರಾರು ಸಲ, ಉಂಡಿದ್ದೇನೆ. ಮಾತಾಡಿದ್ದೇನೆ, ಆಲಿಸಿದ್ದೇನೆ. ಪ್ರೀತಿ ವಿಶ್ವಾಸದಲ್ಲಿ ಮಿಂದಿದ್ದೇನೆ. ನಾಡಿನ ಅನೇಕ ದೊಡ್ಡ ಲೇಖಕರನ್ನು ಭೇಟಿಯಾಗಿದ್ದೇನೆ. ತೀರಿಸಲಾರದ ಇದರ ಋಣವನ್ನು ನಮ್ಮ ಮೇಲೆ ಅನಾಯಾಸ ಹೊರೆಸಿ ನಿರಾಳವಾಗಿ ರಾಮು ಹೊರಟು ಹೋಗಿರುವುದಕ್ಕೆ ದುಃಖಿಸಿಟ್ಟು ಕೂಡ ಬರುತ್ತಿದೆ. ಅವರನ್ನು ಕಳೆದುಕೊಂಡು ನನ್ನಂತಹ ಅನೇಕರು ತಬ್ಬಲಿಗಳಾಗಿದ್ದೇವೆ. ಇಂತಹ ಭಾವನಾತ್ಮಕ ಶ್ರದ್ಧಾಂಜಲಿ ಟಿಪ್ಪಣಿ ರಾಮು ಕೈಗೆ ಸಿಕ್ಕಿದ್ದರೆ ಸಾ. ಇಂಗಾ ಸಾ ಬರಯದು?' ಎಂದು ಬೈದಿರುತ್ತಿದ್ದರು. ನನ್ನ ಬರೆಹವನ್ನು ಇಷ್ಟಪಡುತ್ತಿದ್ದ ಮತ್ತು ಕಟುವಾಗಿ ವಿಮರ್ಶೆ ಮಾಡುತ್ತಿದ್ದ ಅವರಿಗೆ, ಆಂದೋಲನದಲ್ಲಿ ಕಂತುಗಳಾಗಿ ಪ್ರಕಟವಾಗುತ್ತಿರುವ ಆತ್ಮಕಥೆಯನ್ನು ಪುಸ್ತಕ ರೂಪದಲ್ಲಿ ಅವರ ಕೈಗಿಡುವ ಅವಕಾಶ ತಪ್ಪಿಹೋಯಿತಲ್ಲ ಎಂದು ವ್ಯಥೆ ಬಾಕಿ ಉಳಿಯಿತು.

# ನ.10ರಿಂದ ರಾಜ್ಯ ಮಟ್ಟದ ನೆಟ್‌ಬಾಲ್ ಕ್ರೀಡಾಕೂಟ

■ **ಹಂಪಿ ಟೈಮ್ಸ್ ಕೊಪ್ಪಳ**

ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಬೆಂಗಳೂರು, ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಕೊಪ್ಪಳ ಹಾಗೂ ಕೊಪ್ಪಳ ಶ್ರೀ ಶಾರದಾ ಫೌಂಡೇಶನ್ ಟ್ರಸ್ಟ್ (ಲಿ) ಕಿಡದಾಳ ಶ್ರೀ ಶಾರದಾ ಪದವಿಪೂರ್ವ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ರಾಜ್ಯ ಮಟ್ಟದ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳ 2023-24ನೇ ಸಾಲಿನ ನೆಟ್‌ಬಾಲ್ ಕ್ರೀಡಾಕೂಟ ಉದ್ಘಾಟನಾ ಕಾರ್ಯಕ್ರಮವನ್ನು ನವೆಂಬರ್ 10 ರಂದು ಬೆಳಿಗ್ಗೆ 10.30 ಗಂಟೆಗೆ ಕಿಡದಾಳ ಗ್ರಾಮದ ಶ್ರೀ ಶಾರದಾ ಪದವಿ ಪೂರ್ವ ಕಾಲೇಜು ಮೈದಾನದಲ್ಲಿ ಏರ್ಪಡಿಸಲಾಗಿದೆ.

ಕ್ರೀಡಾಕೂಟವನ್ನು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರು ಹಾಗೂ ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವರಾದ ಶಿವರಾಜ ಎಸ್ ತಂಗಡಗಿ ಅವರು ಉದ್ಘಾಟಿಸುವರು. ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಸಚಿವರಾದ ಎಸ್.ಮಧು ಬಂಗಾರಪ್ಪ ಅವರು ಕ್ರೀಡಾ ಧ್ವಜಾರೋಹಣ ನೆರವೇರಿಸುವರು.

ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ ಅವರು ಅಧ್ಯಕ್ಷತೆ ವಹಿಸುವರು. ಸಂಸದರಾದ ಕರಡಿ ಸಂಗಣ್ಣ ಕ್ರೀಡಾ ಜ್ಯೋತಿ ಬೆಳಗಿಸುವರು.



ಮುಖ್ಯ ಅತಿಥಿಗಳಾಗಿ ಶಾಸಕರಾದ ಬಸವರಾಜ ರಾಯರೆಡ್ಡಿ, ದೊಡ್ಡನಗೌಡ ಹನುಮಗೌಡ ಪಾಟೀಲ ಹಾಗೂ ಜಿ.ಜನಾರ್ಧನ ರೆಡ್ಡಿ, ವಿಧಾನ ಪರಿಷತ್ ಸದಸ್ಯರಾದ ಶರೀಲ್ ಜಿ.ನಮೋಶಿ, ಡಾ.ಚಂದ್ರಶೇಖರ್ ಬಿ.ಪಾಟೀಲ, ಶರಣಗೌಡ ಅನ್ನದಾನಗೌಡ ಪಾಟೀಲ ಬಯ್ಯಾಪೂರ ಹಾಗೂ ಹೇಮಲತಾ ನಾಯಕ, ಹಾಲವರ್ತಿ ಗ್ರಾಮ ಪಂಚಾಯತ್‌ನ ಅಧ್ಯಕ್ಷರಾದ ಮುದಿಯಪ್ಪ ಅದೋನಿ ಪಾಲ್ಗೊಳ್ಳುವರು.

ವಿಶೇಷ ಆಹ್ವಾನಿತರಾಗಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಧಾನ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ಕೆ.ಪಿ.ಮೋಹನರಾಜ್, ಶಾಲಾ ಶಿಕ್ಷಣ ಇಲಾಖೆ(ಪದವಿಪೂರ್ವ) ನಿರ್ದೇಶಕರಾದ ಸಿಂಧೂ. ಬಿ. ರೂಪೇಶ, ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಶಾಲಾ ಶಿಕ್ಷಣ ಇಲಾಖೆ (ಪ.ಪೂ), ಬೆಂಗಳೂರು ಕ್ರೀಡಾವಿಭಾಗದ ಸಹಾಯಕ ನಿರ್ದೇಶಕರಾದ ಸಿ.ಜಿ.ರಮೇಶ, ಕಿಡದಾಳ ಶ್ರೀ ಶಾರದಾ ಫೌಂಡೇಷನ್ ಟ್ರಸ್ಟ್ (ರಿ) ಅಧ್ಯಕ್ಷರಾದ ವಿ. ಆರ್. ಪಾಟೀಲ, ಕಾರ್ಯದರ್ಶಿಗಳಾದ ಎಸ್.ಆರ್. ಪಾಟೀಲ, ನಿರ್ದೇಶಕರಾದ ಕಿರಣ್ ವಿ. ಪಾಟೀಲ, ಶಿವಪ್ರಕಾಶ ಬೊಟ್ಟನಕೇರಿ, ಬೆಂಗಳೂರು ನೆಟ್‌ಬಾಲ್ ಸಂಸ್ಥೆಯ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಗಿರೀಶ್ ಸಿ., ಕೊಪ್ಪಳ ನೆಟ್‌ಬಾಲ್ ಸಂಸ್ಥೆಯ ಜಿಲ್ಲಾ ಕಾರ್ಯಾಧ್ಯಕ್ಷರಾದ ಅಬ್ದುಲ್ ರಜಾಕ್ ಟೇಲರ್ ಭಾಗವಹಿಸುವರು.

ಶ್ರೀ ಶಾರದಾ ಪದವಿ ಪೂರ್ವ ಕಾಲೇಜು ಪ್ರಾಂಶುಪಾಲರಾದ ನಾಗೇಶ ಬಾಬು, ಶಾರದಾ ಇಂಟರ್ ನ್ಯಾಷನಲ್ ಸ್ಕೂಲ್ ಪ್ರಾಂಶುಪಾಲರಾದ ಡಾ.ಚಕ್ರವರ್ತಿ, ಕೊ.ಪ.ಪೂ.ಕಾ ಉಪನ್ಯಾಸಕರ ಸಂಘದ ಅಧ್ಯಕ್ಷರಾದ ಸೋಮಶೇಖರಗೌಡ, ಕೊಪ್ಪಳ (ಕ್ರೀಡೆ) ದೈಹಿಕ ಶಿಕ್ಷಣ ಉಪನ್ಯಾಸಕರು ಮತ್ತು ತಾಲೂಕು ಸಂಚಾಲಕರಾದ ಈಶಪ್ಪ ದೊಡ್ಡಮನಿ, ಕೊಪ್ಪಳ ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ) ಉಪನಿರ್ದೇಶಕರಾದ ಜಗದೀಶ ಜಿ. ಹೆಚ್., ಕೊ.ಪ.ಪೂ.ಕಾ ಪ್ರಾಂಶುಪಾಲರ ಸಂಘದ ಅಧ್ಯಕ್ಷರಾದ ಅನಿಲಕುಮಾರ ಜಿ., ಕೊಪ್ಪಳ ದೈಹಿಕ ಶಿಕ್ಷಣ ಉಪನ್ಯಾಸಕರು ಹಾಗೂ ಕ್ರೀಡಾ ಸಂಯೋಜಕರಾದ ತಿರುಪತಿ ನಾಯಕ ಉಪಸ್ಥಿತರಿರುವರು ಎಂದು ಪ್ರಕಟಣೆ ತಿಳಿಸಿದೆ.




# ಆತ್ಮವಿಶ್ವಾಸವಿದ್ದರೆ ಪರೀಕ್ಷೆ ಎದುರಿಸಲು ಸುಲಭ



■ **ಹಂಪಿ ಟೈಮ್ಸ್ ಬಳ್ಳಾರಿ**

ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸಿ, ಧೈರ್ಯದಿಂದ ವಾರ್ಷಿಕ ಪರೀಕ್ಷೆಗಳನ್ನು ಎದುರಿಸುವಂತೆ ಸಜ್ಜುಗೊಳಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಮುಖ್ಯ ಶಿಕ್ಷಕರಿಗೆ ಕರೆ ನೀಡಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ 2023-24ನೇ ಸಾಲಿನ ಎಸ್.ಎಸ್.ಎಲ್.ಸಿ ವಾರ್ಷಿಕ ಫಲಿತಾಂಶ ಸುಧಾರಣೆ ಹಾಗೂ ಪಾರದರ್ಶಕ ಪರೀಕ್ಷೆ ನಡೆಸಲು ತೆಗೆದುಕೊಳ್ಳಬೇಕಾದ ಕ್ರಮಗಳ ಕುರಿತು ನಗರದ ಜಿಲ್ಲಾ ಪಂಚಾಯತ್‌ನ ನಜೀರ್‌ಸಾಬ್ ಸಭಾಂಗಣದಲ್ಲಿ ಮಂಗಳವಾರ ನಡೆದ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯ ಶೇಕಡವಾರು ಫಲಿತಾಂಶ ಉತ್ತಮಗೊಳಿಸಲು ಬೇಕಾದ ಇಲಾಖೆಗೆ ಅಗತ್ಯ ಮಾರ್ಗದರ್ಶನ ಹಾಗೂ ಸಹಕಾರವನ್ನು ಜಿಲ್ಲಾಡಳಿತದಿಂದ ನೀಡಲಾಗುವುದು ಎಂದು ಆತ್ಮ ವಿಶ್ವಾಸ ತುಂಬಿದರು.

ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ಅವರು ಮಾತನಾಡಿ,ಜಿಲ್ಲೆಯಲ್ಲಿನಶಾಲೆಗಳಿಗೆಅಗತ್ಯಕ್ಕನುಗುಣವಾಗಿ ಅತಿಥಿ ಶಿಕ್ಷಕರನ್ನು ಒದಗಿಸಲಾಗಿದೆ. ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣೆಯಲ್ಲಿ ಜಿಲ್ಲೆಯನ್ನು ಮುನ್ನಲೆಗೆ ತರಲು ಶಿಕ್ಷಕರು ಶ್ರಮಿಸಬೇಕಾಗಿದೆ ಎಂದು ಹೇಳಿದರು.

ಜಿಪಂ ವತಿಯಿಂದ ಫಲಿತಾಂಶ ಸುಧಾರಣೆಗಾಗಿ "ಪ್ರತಿಬಿಂಬ" ಕಾರ್ಯಕ್ರಮದಡಿ ವಿಷಯವಾರು ಅಭ್ಯಾಸ ಪುಸ್ತಕಗಳನ್ನು ವಿತರಿಸಲಾಗಿದೆ. ಜಿಲ್ಲಾ ಖನಿಜ ಪ್ರತಿಷ್ಠಾನ ವತಿಯಿಂದ 9 ಮತ್ತು 10ನೇಯ ತರಗತಿ ವಿದ್ಯಾರ್ಥಿಗಳು ಪ್ರತಿ ಭಾನುವಾರ ವಿದ್ಯಾರ್ಥಿ ವಿಹಾರ ಪ್ರವಾಸ ಕೈಗೊಳ್ಳಲು ಆಯೋಜನೆ ಮಾಡಿದೆ. ಪ್ರಶ್ನೆ ಪತ್ರಿಕೆಗೆ ಖರ್ಚಿನ ಹಣವನ್ನು ಭರಿಸಿದೆ. ಪ್ರತಿ 15 ದಿನಗಳಿಗೊಮ್ಮೆ ಘಟಕ ಪರೀಕ್ಷೆ ನಡೆಸಿ, ಫಲಿತಾಂಶವನ್ನು ವಿಶ್ಲೇಷಣೆ ಮಾಡಲಾಗುತ್ತಿದೆ, ಈ ನಿಟ್ಟಿನಲ್ಲಿ ಅತಿಥಿ ಶಿಕ್ಷಕರಿಗೆ ತರಬೇತಿ ನೀಡಲಾಗುತ್ತದೆ ಎಂದು ಅವರು ವಿವರಿಸಿದರು.

ಒಟ್ಟಾರೆಯಾಗಿ ಜಿಲ್ಲೆಯ ಫಲಿತಾಂಶ ಸುಧಾರಣೆಗಾಗಿ ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಸನ್ನದ್ಧವಾಗಿದ್ದು, ಮಕ್ಕಳಿಗೆ ಬೆಸ್ಟ್ ಪ್ರಾಕ್ಟೀಸ್ ಮಾಡಿಸುವುದರ ಮೂಲಕ ಜಿಲ್ಲೆಯ ಫಲಿತಾಂಶ ಸುಧಾರಿಸಲು ಉಳಿದಿರುವ ನಾಲ್ಕು ತಿಂಗಳಲ್ಲಿ ಉತ್ತಮವಾಗಿ ಕಾರ್ಯ ನಿರ್ವಹಿಸಬೇಕು ಎಂದು ಶಿಕ್ಷಕರಿಗೆ ತಿಳಿಸಿದರು.

ಸಭೆಯಲ್ಲಿ 6ರಿಂದ 8ನೇ ತರಗತಿಗೆ ನೇಮಕವಾದ ಜಿಪಿಟಿ ಶಿಕ್ಷಕರಿಗೆ ನೇಮಕಾತಿ ಆದೇಶಗಳನ್ನು ನೀಡಿ ಶುಭ ಕೋರಿದರು.

ಜಿಲ್ಲಾಧಿಕಾರಿಗಳು, ಖಂ-1 ಪರೀಕ್ಷೆಯ ಪ್ರಶ್ನೆ ಪತ್ರಿಕೆಯ ಖರ್ಚು ಹಣವನ್ನು ಚೆಕ್ ಮೂಲಕ ಡಿಡಿಪಿಐ ಅವರಿಗೆ ನೀಡಿದರು. ಕಾರ್ಯಕ್ರಮದಲ್ಲಿ ರಾಜ್ಯಮಟ್ಟದ ಪ್ರಾಥಮಿಕ ಶಾಲಾ ಮಕ್ಕಳ ಕ್ರೀಡಾಕೂಟದಲ್ಲಿ ವಿಜೇತರಾಗಿ ರಾಷ್ಟ್ರಮಟ್ಟಕ್ಕೆ ಆಯ್ಕೆಯಾದ ಎಂಟು ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಪ್ರೋತ್ಸಾಹಿಸಿದರು.

ಜಿಲ್ಲಾ ನೋಡಲ್ ಅಧಿಕಾರಿ ಎ.ಕೆ.ಸತ್ಯ ನಾರಾಯಣ ಅವರು, ಫಲಿತಾಂಶ ಸುಧಾರಣೆಗಾಗಿ ಹಮ್ಮಿಕೊಳ್ಳುತ್ತಿರುವ ಕಾರ್ಯಕ್ರಮಗಳ ಬಗ್ಗೆ ಪಿಪಿಟಿ ಮೂಲಕ ಸಮಗ್ರವಾಗಿ ಮಂಡಿಸಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕಿ ಎ.ಹನುಮಕ್ಕ, ಜಿಲ್ಲಾ ಬಿಸಿಯೂಟ ಶಿಕ್ಷಣಾಧಿಕಾರಿ ಶೇಖರ್ ಹೊರಪೇಟೆ, ಬಳ್ಳಾರಿ ಪೂರ್ವ ವಲಯ ಕ್ಷೇತ್ರ ಶಿಕ್ಷಣಾಧಿಕಾರಿ ನಯೀಮುರ್ ರೆಹಮಾನ್, ಕುರುಗೋಡು ತಾಲೂಕಿನ ಬಿಇಒ ಟಿ.ಎಂ ಸಿದ್ದಲಿಂಗಮೂರ್ತಿ, ಸಿರುಗುಪ್ಪ ತಾಲೂಕಿನ ಬಿಇಒ ಹೆಚ್.ಗುರಪ್ಪ, ಗಣಿತ ವಿಷಯ ಪರಿವೀಕ್ಷಕ ಎಂ.ಬಸವರಾಜ್, ಬಳ್ಳಾರಿ ಪೂರ್ವ ವಲಯದ ಶಿಕ್ಷಣ ಸಂಯೋಜಕ ಗೂಳೆಪ್ಪ, ಸಮಾಜ ವಿಜ್ಞಾನ ವಿಷಯ ಪರಿವೀಕ್ಷಕ ಹೆಚ್.ವೀರೇಶಪ್ಪ ಸೇರಿದಂತೆ ಎಲ್ಲಾ ತಾಲೂಕಿನ ಕ್ಷೇತ್ರ ಸಮನ್ವಯ ಅಧಿಕಾರಿಗಳು, ಎಸ್.ಎಸ್.ಎಲ್.ಸಿ ನೋಡಲ್ ಅಧಿಕಾರಿಗಳು, ಡಿಡಿಪಿಐ ಕಚೇರಿಯ ವಿಷಯ ಪರಿವೀಕ್ಷಕರು ಹಾಗೂ ನಾಲ್ಕು ತಾಲೂಕುಗಳ ಸರ್ಕಾರಿ ಅನುದಾನಿತ ಪ್ರೌಢಶಾಲಾ ಮುಖ್ಯ ಶಿಕ್ಷಕರು ಹಾಜರಿದ್ದರು.

## ಮೈಕ್ರೋ ನ್ಯೂಸ್

### ಕರ್ನಾಟಕ ಸುವರ್ಣ ಸಂಭ್ರಮಾಚರಣೆ ಹಾಗೂ ಭಾವಗೀತೆಗಳ ಬಿಡುಗಡೆ

**ಹಂಪಿ ಟೈಮ್ಸ್ ಹೊಸಪೇಟೆ:**
ಕರ್ನಾಟಕ ಸುವರ್ಣ ಸಂಭ್ರಮಾಚರಣೆ-50ರ ಆಚರಣೆ ಹಾಗೂ ಭಾವಗೀತೆಗಳ ಬಿಡುಗಡೆ ಕಾರ್ಯಕ್ರಮವನ್ನು ವಿಜಯನಗರ ಮಹಾವಿದ್ಯಾಲಯದ ಸುವರ್ಣ ಭವನದಲ್ಲಿ ನ.10ರಂದು ಬೆಳಿಗ್ಗೆ 10 ಗಂಟೆಗೆ ವಿಜಯನಗರ ಸಾಹಿತ್ಯ ಪರಿಷತ್ತು ಮತ್ತು ಕರ್ನಾಟಕ ಸಂಘ, ವಿಜಯನಗರ ಮಹಾವಿದ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದೆ. ವಿಜಯನಗರ ಮಹಾವಿದ್ಯಾಲದ ಅಧ್ಯಕ್ಷರಾದ ಅಸುಂಡಿ ಬಿ. ನಾಗರಾಜಗೌಡರು ಕಾರ್ಯಕ್ರಮ ಉದ್ಘಾಟಿಸಿ ಭಾವಗೀತೆಗಳನ್ನು ಬಿಡುಗಡೆಗೊಳಿಸಲಿದ್ದಾರೆ. ಕರ್ನಾಟಕ ನಾಮಕರಣ ಹಿನ್ನೆಲೆ ಕುರಿತು ವಿಜಯನಗರ ಮಹಾವಿದ್ಯಾಲಯ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ಮೃತ್ಯುಂಜಯ ರುಮಾಲೆ ಉಪನ್ಯಾಸ ನೀಡಲಿದ್ದಾರೆ. ಜಂಬುನಾಥ ಹೆಚ್.ಎಂ. ಮತ್ತು ಜಿ.ಯರಿಸ್ವಾಮಿ ರಚಿಸಿರುವ ಹಾಗೂ ಅದೇ ದಿನದಂದು ಯೂಟ್ಯೂಬ್‌ನಲ್ಲಿ ಬಿಡುಗಡೆಗೊಳ್ಳಲಿರುವ ಭಾವಗೀತೆಗಳ ಕುರಿತು ಕನ್ನಡದ ಕಟ್ಟಾಳು ಡಾ. ಎತ್ನಳ್ಳಿ ಮಲ್ಲಯ್ಯ ಮಾತನಾಡಲಿದ್ದಾರೆ. ಜೆ.ಹೆಚ್.ಎಂ. ತಿಪ್ಪೇಶ್, ನಂದೀಶ್. ಭೂಮಿಕಾ ಗಡಾದ, ನಿರ್ಮಲಾ ನೀಲಿ ಇವರು ಭಾವಗೀತೆಗಳನ್ನು ಪ್ರಸ್ತುತಪಡಿಸಲಿದ್ದಾರೆ. ಚಿತ್ತವಾಡ್ಗಿ ಅಶ್ವಿನಿ ಶಾಲೆಯ ವಿದ್ಯಾರ್ಥಿಗಳು ಸಮೂಹ ನೃತ್ಯ ನೆರವೇರಿಸಲಿದ್ದು, ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ಮಹಾವಿದ್ಯಾಲಯದ ಅಧ್ಯಕ್ಷರಾದ ಸಿದ್ದರಾಮ ಕಲ್ಮಠ ಮತ್ತು ವಿಜಯನಗರ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಮಧುರಚನ್ನ ಶಾಸ್ತ್ರಿ ಉಪಸ್ಥಿತರಿರುವರು. ಶಿಕ್ಷಣ ಇಲಾಖೆಯ ಸಮೂಹ ಸಂಪನ್ಮೂಲ ವ್ಯಕ್ತಿ ನಾಗರಾಜ ಎನ್ ಕಾರ್ಯಕ್ರಮ ನಿರ್ವಹಿಸಲಿದ್ದಾರೆ.

### ಮಕ್ಕಳ ಕಲಿಕೆಯಲ್ಲಿ ಪಾಲಕರ ಪಾತ್ರ

ಮೊದಲ ಪುಟದಿಂದ

ವೀಡಿಯೋ ಕಾನ್ಸರೆನ್ಸ್ ಕಾರ್ಯಕ್ರಮದಲ್ಲಿ ಕೊಪ್ಪಳ ಜಿಲ್ಲಾಧಿಕಾರಿ ನಲಿನ್ ಅತುಲ್, ವಿಜಯನಗರ ಜಿ.ಪಂ ಉಪಕಾರ್ಯದರ್ಶಿ ಭೀಮಣ್ಣ ಲಾಳಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಜಿಲ್ಲಾ ನಿರೂಪಣಾಧಿಕಾರಿ ಸುಭದ್ರದೇವಿ, ಕಲಿಕೆ-ಟಾಟಾ ಟ್ರಸ್ಟ್ ಕಾರ್ಯನಿರ್ವಾಹಕ ನಿರ್ದೇಶಕ ಶಿವಕುಮಾರ ಸೇರಿದಂತೆ ಜಿಲೆಯ ಎಲ್ಲಾ ಯೋಜನೆಗಳ ಶಿಶು ಅಭಿಭಿವೃದ್ಧಿ ಯೋಜನಾಧಿಕಾರಿಗಳು, ಯುನಿಸೆಫ್ ಪ್ರತಿನಿಧಿಗಳು ಹಾಗೂ ಅಂಗನವಾಡಿ ಮೇಲ್ವಿಚಾರಕಿಯರು ಹಾಗೂ ಕಾರ್ಯಕರ್ತೆಯರು ಭಾಗವಹಿಸಿದ್ದರು.




# ಕೇಂದ್ರ ಸರ್ಕಾರದ 9 ವರ್ಷದ ಸಾಧನೆಗಳ ಅನಾವರಣ-ಛಾಯಾಚಿತ್ರ ಪ್ರದರ್ಶನ



■ **ಹಂಪಿ ಟೈಮ್ಸ್ ಬಳ್ಳಾರಿ**

ಕೇಂದ್ರ ಸರ್ಕಾರದ ಒಂಭತ್ತು ವರ್ಷಗಳ ಸಾಧನೆಗಳು, ಪ್ರಧಾನ ಮಂತ್ರಿ ವಿಶ್ವ ಕರ್ಮ ಯೋಜನೆ, ಸ್ವಚ್ಛ ಭಾರತ ಹಾಗೂ ಇನ್ನಿತರೆ ಯೋಜನೆಗಳ ಕುರಿತು ಬಳ್ಳಾರಿ ಕ್ಷೇತ್ರಿಯ ಕೇಂದ್ರ ಸಂವಹನ ಇಲಾಖೆ ವತಿಯಿಂದ ಇಲ್ಲಿನ ವೀರಶೈವ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಇಂದಿನಿಂದ ಮೂರು ದಿನಗಳ ಛಾಯಾಚಿತ್ರ ಪ್ರದರ್ಶನ ಏರ್ಪಡಿಸಿದೆ.

ಮಹಾನಗರ ಪಾಲಿಕೆಯ ಸದಸ್ಯರು ಹಾಗೂ ಮಾಜಿ ಮಹಾಪೌರರಾದ ಎಂ.ರಾಜೇಶ್ವರಿ ಅವರು ಬುಧವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಸರ್ಕಾರದ ಯೋಜನೆಗಳು ಜನಸಾಮಾನ್ಯರಿಗೆ ತಲುಪಲು ಇಂಥಹ ಜಾಗೃತಿ ಕಾರ್ಯಕ್ರಮಗಳು ಸಹಕಾರಿಯಾಗುತ್ತವೆ, ಹಾಗಾಗಿ ಇಂಥ ಕಾರ್ಯಕ್ರಮಗಳು ಇನ್ನೂ ಹೆಚ್ಚಾಗಿ ಆಯೋಜಿಸುವಂತೆ ಸಲಹೆ ನೀಡಿದರು.

ಹೈದರಾಬಾದ್‌ನ ದೂರದರ್ಶನ ಕೇಂದ್ರದ ನಿವೃತ್ತ ಉಪನಿರ್ದೇಶಕ ಡಾ.ಕೆ.ಸುಧಾಕರ್ ರಾವ್ ಅವರು ಅತಿಥಿ ಉಪನ್ಯಾಸಕರಾಗಿ ಮಾತನಾಡಿ, ಕೃಷಿ ಸಿಂಚಯಿ ಯೋಜನೆ, ಸಾಯಿಲ್ ಆರೋಗ್ಯ ಕಾರ್ಡ್, ಕಿಸಾನ್ ಸಮ್ಮಾನ್, ನೀಮ್ ಕೋಟೆಡ್ ಯೂರಿಯಾ, ಮೇರಿ ಮಾಠಿ ಮೇರಾ ದೇಶ್, ಏಕ ಭಾರತ ಶ್ರೇಷ್ಠ ಭಾರತ, ಆಯುಷ್ಮಾನ್ ಭಾರತ್, ಒಂದು ರಾಷ್ಟ್ರ-ಒಂದು ಮಾರುಕಟ್ಟೆ-ಒಂದು ತೆರಿಗೆ, ಕೃಷಿ ನಿರ್ವಹಣೆಯಲ್ಲಿಪರ್ಯಾಯಪೋಷಕಾಂಶಗಳ ಬಳಕೆಗೆ ಉತ್ತೇಜನ ನೀಡುವ ಪಿಎಂ ಪ್ರಣಾಮ್ ಯೋಜನೆಗಳ ಬಗ್ಗೆ ವಿಸ್ತಾರವಾಗಿ ಮಾಹಿತಿ ನೀಡಿದರು.

ಕಾರ್ಯಕ್ರಮ ಅಂಗವಾಗಿ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು. ಇದೇ ಸಂದರ್ಭದಲ್ಲಿ ವಿಜೇತರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಸಂಗೀತ ಮತ್ತು ನಾಟಕ ವಿಭಾಗದ ಕಲಾವಿದರಿಂದ ಜಾಗೃತಿ ಕಾರ್ಯಕ್ರಮ ನಡೆಯಿತು. ಈ ಸಂದರ್ಭದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ನಿಷ್ಠಿ ರುದ್ರಪ್ಪ, ವೀರಶೈವ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲ ಪಿ.ಎಸ್.ಗೌತಮ್, ಆಡಳಿತ ಮಂಡಳಿಯ ಸದಸ್ಯರು, ಬಳ್ಳಾರಿ ಕೇಂದ್ರ ಸಂವಹನ ಇಲಾಖೆಯ ರಾಮಕೃಷ್ಣ ಹಾಗೂ ಶಿವಮೊಗ್ಗ ಕೇಂದ್ರ ಸಂವಹನ ಇಲಾಖೆಯ ಲಕ್ಷ್ಮೀಕಾಂತ ಹಾಗೂ ಮತ್ತಿತರರು ಉಪಸ್ಥಿತರಿದ್ದರು. ಮೂರು ದಿನಗಳ ಕಾಲ ನಗರದ ಕಂಟೋನ್‌ಮೆಂಟ್‌ನ ವೀರಶೈವ ಪದವಿ ಪೂರ್ವ ಕಾಲೇಜು ಸಭಾಂಗಣದಲ್ಲಿ ಏರ್ಪಡಿಸಿರುವ ಕೇಂದ್ರ ಸರ್ಕಾರದ ವಿವಿಧ ಯೋಜನೆಗಳ ಮಾಹಿತಿ ಕುರಿತು ನ.10 ರವರೆಗೆ ಸಾರ್ವಜನಿಕರು ವೀಕ್ಷಿಸಬಹುದು.

**ಮಹಿಳೆಯರಿಗಾಗಿ ನೀರು, ನೀರಿಗಾಗಿ ಮಹಿಳೆಯರು ಜಲ ದೀಪಾವಳಿ ಕಾರ್ಯಕ್ರಮಕ್ಕೆ ಚಾಲನೆ**

# ನೀರಿನ ಮಿತ ಬಳಕೆ ಜಾಗೃತಿ ಮೂಡಿಸಿ



■ **ಹಂಪಿ ಟೈಮ್ಸ್ ರಾಯಚೂರು**

ಪ್ರತಿಯೊಂದು ಜೀವಿಗೂ ನೀರು ಅಗತ್ಯವಿರುವ ಸಂಪನ್ಮೂಲವಾಗಿದ್ದು, ಪ್ರತಿಯೊಬ್ಬರು ನೀರನ್ನು ಮಿತವಾಗಿ ಬಳಸಬೇಕು ಮತ್ತು ನೀರಿನ ಮಹತ್ವವನ್ನು ನೀರಿನ ಮಿತ ಬಳಕೆಯ ಬಗ್ಗೆ ಪ್ರತಿಯೊಬ್ಬರಲ್ಲಿಯೂ ಜಾಗೃತಿ ಮೂಡಿಸುವ ಕಾರ್ಯವಾಗಬೇಕು ಮತ್ತು ನೀರಿನ ಮೂಲ ಸೌಕರ್ಯದ ಬಗ್ಗೆ ಮಾಲಿಕತ್ವದ ಭಾವನೆಯನ್ನು ಬೆಳೆಸಿಕೊಳ್ಳಿ ಎಂದು ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಜಗದೀಶ ಗಂಗಣ್ಣನವರ ಅವರು ಹೇಳಿದರು.

ಅವರು ನ.8ರಂದು ರಾಯಚೂರು ತಾಲೂಕಿನ ಚಿಕ್ಕಸುಗೂರು ಜಲಶುದ್ಧೀಕರಣ ಘಟಕದಲ್ಲಿ ಅಮೃತ ಅಭಿಯಾನದಡಿ ನಗರಸಭೆಯಿಂದ ಹಮ್ಮಿಕೊಂಡಿದ್ದ ನೀರಿಗಾಗಿ ಮಹಿಳೆಯರು, ಮಹಿಳೆಯರಿಗಾಗಿ ನೀರು ಘೋಷವಾಕ್ಯದಡಿ ಜಲ ದೀಪಾವಳಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದರು.

ಮಹಿಳೆಯರು ತಮ್ಮ ದಿನನಿತ್ಯದ ಜೀವನದಲ್ಲಿ ನೀರಿನ ಬಳಕೆಯನ್ನು ಅತಿ ಹೆಚ್ಚಾಗಿ ಬಳಕೆ ಮಾಡುವುದರಿಂದ ಮನೆಗಳಿಗೆ ಶುದ್ಧ ಮತ್ತು ಸುರಕ್ಷಿತ ಕುಡಿಯುವ ನೀರು ಪೂರೈಕೆಯ ಪ್ರಕ್ರಿಯೆ, ಉತ್ತಮ ಗುಣಮಟ್ಟದ ನೀರನ್ನು ಪಡೆದುಕೊಳ್ಳಲು ಅನುಸರಿಸುವ ವಿವಿಧ ಪರೀಕ್ಷಾ ಮಾದರಿ ಪ್ರಕ್ರಿಯೆಗಳ ಬಗ್ಗೆ ಮಾಹಿತಿಯನ್ನು ಪಡೆದುಕೊಳ್ಳುವ ಮೂಲಕ ಈ ಕಾರ್ಯಕ್ರಮದ ಸದುಪಯೋಗವನ್ನು ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಇದೇ ವೇಳೆ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಮಹಿಬೂಬ್ ಜಿಲಾನಿ ಅವರು ಮಾತನಾಡಿ, ಕುಡಿಯುವ ನೀರಿನ ಶುದ್ಧೀಕರಣ ಪ್ರಕ್ರಿಯೆಯ ಕುರಿತು ಪ್ರತಿಯೊಂದು ಮಾಹಿತಿಯನ್ನು ಮಹಿಳೆಯರು ಪಡೆದುಕೊಂಡಲ್ಲಿ, ಮಹಿಳೆಯರು ಹೆಚ್ಚಿನ ರೀತಿಯಲ್ಲಿ ಸಬಲರಾಗುತ್ತಾರೆ ಮತ್ತು ಹೆಚ್ಚಿನ ಜ್ಞಾನವನ್ನು ಪಡೆದಂತಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮಕ್ಕೂ ಮೊದಲು ಜಲ ಶುದ್ಧೀಕರಣ ಘಟಕದಲ್ಲಿ ಶುದ್ಧ ಕುಡಿಯುವ ನೀರು ಪೂರೈಕೆ ಪ್ರಕ್ರಿಯೇ, ಶುದ್ಧೀಕರಣ ಪ್ರಕ್ರಿಯೆ ಹಾಗೂ ಶುದ್ಧ ಕುಡಿಯುವ ನೀರಿಗಾಗಿ ಬಳಸುವ ಉಪಕರಣಗಳು, ಮಿಶ್ರಣಗಳು ಹಾಗೂ ಯಂತ್ರಗಳ ಬಗ್ಗೆ ಮಹಿಳೆಯರಿಗೆ ತಿಳಿಸಿದರು.

ಕಾರ್ಯಕ್ರಮದಲ್ಲಿ ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಮಹಿಳಾ ಸ್ವಸಹಾಯ ಗುಂಪುಗಳ ಮಹಿಳೆಯರಿಗೆ ನೀರಿನ ಮಿತವ್ಯಯ ಬಳಕೆಗಾಗಿ ಕಿಟ್‌ಗಳನ್ನು ವಿತರಿಸಲಾಯಿತು. ಈ ಸಂದರ್ಭದಲ್ಲಿ, ನಗರಸಭೆ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಮಹೇಶ, ಕರ್ನಾಟಕ ನಗರ ನೀರು ಸರಬರಾಜು ಇಲಾಖೆಯ ಅಧಿಕಾರಿ ಚಂದ್ರಕಾಂತ ಹೆಚ್.ಚೌಹಾಣ್, ಜಿಲ್ಲಾ ಕೌಶಲ್ಯ ಮಿಷನ್ ವ್ಯವಸ್ಥಾಪಕರಾದ ಸುರೇಶ ವಿಬೂತಿ, ರಸೂಲ್, ನವೀನ್, ನಗರಸಭೆ ಅಧಿಕಾರಿ ಕೃಷ್ಣ ಕಟ್ಟಿಮನಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.




ಕೊಪ್ಪಳ: ತುಂಗಭದ್ರಾ ಜಲಾಶಯ ಮುಂಭಾಗದ ಹೊಸಪೇಟೆ ಮುನಿರಾಬಾದ್ ನಡುವಿನ ನದಿಗೆ ನಿರ್ಮಿಸಲಾದ ಸೇತುವೆ ಮೇಲ್ಭಾಗದಲ್ಲಿ ಚಲಿಸುತ್ತಿದ್ದ ಮೈನ್ಸ್ ಲಾರಿ ಸೇತುವೆಯ ತಡೆಗೋಡೆಗೆ ಡಿಕ್ಕಿ ಹೊಡೆದು ನದಿಗೆ ಉರುಳಿದೆ. ನದಿಗೆ ಬಿದ್ದು ಸ್ಥಳದಲ್ಲೆ ಬಿಹಾರ್ ಮೂಲಕ ಲಾರಿ ಚಾಲಕ ಸಾವನ್ನಪ್ಪಿದ್ದಾನೆ. ಸ್ಥಳಕ್ಕೆ ಮುನಿರಾಬಾದ್ ಪೊಲೀಸರು ಭೇಟಿ ನೀಡಿ ಪರಿಶೀಲಿಸಿದ್ದಾರೆ.

**ಹಂಪಿ ಟೈಮ್ಸ್**
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
- ಜಾಹೀರಾತು ವ್ಯವಸ್ಥಾಪಕರು.




## ತುಂಗಭದ್ರಾ ನೀರಿನ ಮಟ್ಟ



ಬುಧವಾರ : 8-11-2023

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1603.49 ಅಡಿ |
| ಒಳ ಹರಿವು | 00 ಕ್ಯುಸೆಕ್ |
| ಹೊರ ಹರಿವು | 9982 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 26.379 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1632.19 ಅಡಿ |
| ಒಳ ಹರಿವು | 5250 ಕ್ಯುಸೆಕ್ |
| ಹೊರ ಹರಿವು | 10060 ಕ್ಯುಸೆಕ್ |
| ಸಾಮರ್ಥ್ಯ | 102.536 ಟಿಎಂಸಿ |

# ಕಲೆ ಜೀವಂತಿಕೆಗೆ ಪ್ರೋತ್ಸಾಹವಿರಲಿ




**ಹಂಪಿ ಟೈಮ್ಸ್ ಕೊಟ್ಟೂರು**

ಸುಸಂಸ್ಕೃತರನ್ನಾಗಿ ಪರಿವರ್ತಿಸುವ ಶಕ್ತಿ ಸಂಗೀತಕ್ಕಿದೆ ಹಾಗಾಗಿ ಯುವ ಪೀಳಿಗೆಯು ಹೆಚ್ಚೆಚ್ಚು ಸಂಗೀತ ಮತ್ತು ಸಾಹಿತ್ಯದ ಕಡೆ ಹೆಚ್ಚು ಒಲವು ತೋರಬೇಕು ಎಂದು ಜಾನಪದ ಕಲಾ ಸಂಘದ ಅಧ್ಯಕ್ಷ ಎಸ್.ಹನುಮಂತಪ್ಪ ಹೇಳಿದರು.

ತಾಲೂಕಿನ ಕುಡಿತಿನಿಮಗ್ಗಿ ಗ್ರಾಮದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಆವರಣದಲ್ಲಿ ಮಂಗಳವಾರ ಶ್ರೀ ಬನ್ನಿ ಮಹಾಂಕಾಳಿ ಜಾನಪದ ಕಲಾ ಟ್ರಸ್ಟ್ ಕಮಿಟಿ(ರಿ) ಸಂಗಮೇಶ್ವರ, ಕಾಳಮ್ಮ ಗಂಡ ಶಂಕ್ರಾಚಾರಿ ಅವರು ನಡೆಸಿಕೊಟ್ಟ ಸುಗಮ ಸಂಗೀತ ಕಾರ್ಯಕ್ರಮಲ್ಲಿ ಮಾತನಾಡಿದರು. ಕೊಟ್ಟೂರಿನ ಲೋಕೇಶ್ ಮಾತನಾಡಿ, ಜಾನಪದ ಕಲೆ ಮತ್ತು ಸುಗಮ ಸಂಗೀತದಂತಹ ಕಾರ್ಯಗಳನ್ನು ನಡೆಸಿಕೊಡುವ ಕಲಾವಿದರು ಇತ್ತೀಚಿನ ದಿನಗಳಲ್ಲಿ ಕಡಿಮೆ ಆಗುತ್ತಿದ್ದು, ಇಂತಹ ಕಲಾವಿದರನ್ನು ಹಾಗೂ ಜಾನಪದ ಕಲೆಯನ್ನು ಉಳಿಸಿ ಬೆಳೆಸುವ ಕಾರ್ಯ ಯುವ ಪೀಳಿಗೆಯ ಕೈಯಲ್ಲಿದೆ ಎಂದರು.

ಕಾಳಮ್ಮ ಗಂಡ ಶಂಕ್ರಚಾರಿ ಅವರ ಸುಗಮ ಸಂಗೀತ ಹಾಡುಗಳನ್ನುಹಾಲಿಸಿದ ಪ್ರೇಕ್ಷಕರು ಪ್ರಶಂಸೆ ವ್ಯಕ್ತಪಡಿಸಿದರು.

ಈ ವೇಳೆ ತಬಲವಾದ್ಯ ಎಂ.ರಾಮಾಚಾರಿ ಬಂಡ್ರಿ, ಹಾರ್ಮೋನಿಯಂ ಶಿವಾನಂದ ಕೊಂಗನ ಹೊಸೂರು ನಡೆಸಿಕೊಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ದೇವೇಂದ್ರಗೌಡ, ಮುಖ್ಯ ಅತಿಥಿಗಳು ವೈ.ಮಲ್ಲಪ್ಪ ರಾಜ್ಯ ಪ್ರಶಸ್ತಿ ಪುರಸ್ಕೃತರು, ಬಿ. ಕೊಟ್ರೇಶಪ್ಪ ಅಧ್ಯಕ್ಷರು ವಾಲ್ಮೀಕಿ ಸಂಘ, ಪಿ.ಚನ್ನಬಸಪ್ಪ ಅಧ್ಯಕ್ಷರು ಎಸ್ಡಿಎಂಸಿ, ಬಿ.ಕೊಟ್ರಚಾರಿ ಮಾಜಿ ಅಧ್ಯಕ್ಷ ಗ್ರಾ.ಪಂ ಅಂಬಳಿ ಸೇರಿದಂತೆ ಅನೇಕ ಗಣ್ಯರು ಹಾಗೂ ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

# ಸ್ವಸಹಾಯ ಸಂಘಗಳಿಗೆ ಸಹಾಯಧನಕ್ಕಾಗಿ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ವತಿಯಿಂದ ಸ್ವಯಂ ಉದ್ಯೋಗ ಕಾರ್ಯಕ್ರಮದಡಿ ಸ್ವಸಹಾಯ ಸಂಘಗಳಿಗೆ ಸಹಾಯಧನ ಒದಗಿಸಲು ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ.

ಒಟ್ಟು 15 ಫಲಾನುಭವಿಗಳ ಗುರಿ ನಿಗದಿಪಡಿಸಲಾಗಿದ್ದು, ಬ್ಯಾಂಕ್ ವಿಧಿಸುವ ಶೇ.07ರ ಮೇಲ್ಪಟ್ಟು ಶೇಕಡವಾರು ಬಡ್ಡಿ ಮೊತ್ತವನ್ನು (ಬಡ್ಡಿಸಹಾಯಧನ) ಈ ಯೋಜನೆಯಿಂದ ಭರಿಸಲಾಗುತ್ತದೆ.

ನಿಗಧಿತ ನಮೂನೆಯಲ್ಲಿ ಅರ್ಜಿ ಭರ್ತಿ ಮಾಡಿ ನ.27ರೊಳಗಾಗಿ ಕಂಪ್ಲಿ ಪುರಸಭೆ ಕಚೇರಿಗೆ ಸಲ್ಲಿಸಬೇಕು.

ಅರ್ಜಿಯೊಂದಿಗೆ ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪಡಿತರ ಚೀಟಿ, ಮತದಾರರ ಗುರುತಿನ ಚೀಟಿ, ಆಧಾರ್‌ಕಾರ್ಡ್, ಯೋಜನಾ ವರದಿ, ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರಗಳು, ಸ್ವ-ಸಹಾಯ ಗುಂಪುಗಳ ಭಾವಚಿತ್ರ, ಗುಂಪಿಗೆ ಸಂಬಂಧಪಟ್ಟ ದಾಖಲೆ ಮತ್ತು ಯೋಜನಾ ವರದಿ ಪ್ರತಿಯನ್ನು ಲಗತ್ತಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಕಂಪ್ಲಿ ಪುರಸಭೆ ಕಚೇರಿಗೆ ಸಂಪರ್ಕಿಸಬಹುದು ಎಂದು ಪುರಸಭೆಯ ಮುಖ್ಯಾಧಿಕಾರಿ ಕೆ.ದುರುಗಣ್ಣ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಇಂದು ಬಳ್ಳಾರಿ ನಗರ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯ

**ಹಂಪಿ ಟೈಮ್ಸ್ ಬಳ್ಳಾರಿ**

ನಗರ ಜೆಸ್ಕಾಂ ಉಪವಿಭಾಗ-2 ರ ವ್ಯಾಪ್ತಿಗೆ ಬರುವ 110/11ಕೆವಿ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವ ಕಾರ್ಯವನ್ನು ಇನ್‌ಫ್ಯಾಂಟ್ರಿ ರಸ್ತೆಯಲ್ಲಿ ಕೈಗೆತ್ತಿಕೊಳ್ಳುತ್ತಿರುವುದರಿಂದ ನ.09 ರಂದು ಬೆಳಿಗ್ಗೆ 09 ರಿಂದ ಸಂಜೆ 6 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.

**ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:** ಎಫ್-33 ಫೀಡರ್ ವ್ಯಾಪ್ತಿಯ ಕೆ.ಹೆಚ್.ಬಿ.ಕಾಲೋನಿ, ನೇತಾಜಿ ನಗರ, ಇನ್ನಾರೆಡ್ಡಿ ಲೇಔಟ್, ಇನ್‌ಫೆಂಟರಿ ರಸ್ತೆ, ವಾಸವಿ ಶಾಲೆ, ಕೊಳಗಲ್ ರಸ್ತೆ, ವಿದ್ಯಾನಗರ, ಕಲ್ಯಾಣಿ ಕಾಲೋನಿ, ಭತ್ರಿ ರೋಡ್, ಭತ್ರಿ, ಗುರು ಕಾಲೋನಿ, ಸತ್ಯವಾಣಿ ನಗರ, ಸಿದ್ದಾರ್ಥ ನಗರ, ವಿಯಾನಿ ಶಾಲೆ ಸೇರಿದಂತೆ ಇತರ ಏರಿಯಾಗಳಲ್ಲಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬಳ್ಳಾರಿ ನಗರ ಜೆಸ್ಕಾಂ ಉಪವಿಭಾಗ-2ರ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಅಶೋಕ ರೆಡ್ಡಿ ತಿಳಿಸಿದ್ದಾರೆ.




# ಅಂಗವಿಕಲರಿಗೆ ವೈಯಕ್ತಿಕ ಸಾಲ-ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನ




**ಹಂಪಿ ಟೈಮ್ಸ್ ಬಳ್ಳಾರಿ**

ಕಂಪ್ಲಿ ಪುರಸಭೆಯ 2021-22ನೇ ಸಾಲಿನ ಎಸ್.ಎಫ್.ಸಿ ಶೇ.05ರ ವೈಯಕ್ತಿಕ ಸೌಲಭ್ಯದಡಿ ಅಂಗವಿಕಲರಿಂದ ವೈಯಕ್ತಿಕ ಸಾಲ-ಸೌಲಭ್ಯಕ್ಕಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ಮುಖ್ಯಾಧಿಕಾರಿ ಕೆ.ದುರುಗಣ್ಣ ಅವರು ತಿಳಿಸಿದ್ದಾರೆ.

**ಬೇಕಾದ ದಾಖಲೆಗಳು:** ನಿಗದಿತ ಅರ್ಜಿ ನಮೂನೆ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಯೋಜನಾ ವರದಿ, ಪಡಿತರ ಚೀಟಿ, ಆಧಾರ್‌ಕಾರ್ಡ್, ಮತದಾರರ ಗುರುತಿನ ಚೀಟಿ, ಯುಡಿಐಡಿ ಕಾರ್ಡ್, ಅಂಗವಿಕಲರ ವೈದ್ಯಕೀಯ ಪತ್ರ (ಶೇ.70ರಷ್ಟು ಇದ್ದವರು ಮಾತ್ರ). ಅರ್ಜಿ ಸಲ್ಲಿಸಲು ನ.18 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಂಪ್ಲಿ ಪುರಸಭೆ ಕಚೇರಿಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.




ಇ-ಪೇಪರ್ ಉಚಿತ

ಇಂದೇ ಹಂಪಿ ಟೈಮ್ಸ್ ವಾಟ್ಸ್‌ಪ್ ಚಾನಲ್ ಸೇರಿ, ಇ-ಪೇಪರ್ ಉಚಿತವಾಗಿ ಪಡೆಯಿರಿ




Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA